A.—Sri VEERENDRA PATIL (Deputy Minister for Home Affairs and Industries).—

(*a*) No.

(*b*), (*c*) and (*d*) Does not arise.

Loan sanctioned to Chamarajanagar-Ramasamudra Municipality for the supply of Drinking Water.

Q.—3458. Sri U. M. MADAPPA (Chamarajanagar).—

Will the Government be pleased to state —

(*a*) the amount of loan sanctioned by the Government to Chamarajanagar-Ramasamudra Municipality for the purpose of supply of drinking water together with the date on which it was sanctioned ;

(*b*) the amount of expenditure incurred so far ;

(*c*) the reasons for the delay in the execution of the said scheme ?

A.—Sri R. CHENNIGARAMAIAH (Minister for Local Self-Government).—

(*a*) Rs. 94,140—26th December 1952.

Rs. 3,27,790—2nd December 1957.

(*b*) Rs. 3,67,574 till the end of January 1958.

(*c*) The delay is due to acquisition proceedings involved in the Scheme. However, the matter is being expedited.

PAPER LAID ON THE TABLE

Sri C. M. POONACHA (Minister for Home Affairs and Industries).—Sir, I beg to lay on the Table Notification No. H.D. 59 MVF 57, dated 11th March 1958 issued under clause (*a*) of sub-section (2) of Section 68 of the Motor Vehicles Act, 1939 (Central Act IV of 1939).

State Cotton Committee

Motion for Election

Sri H. S. RUDRAPPA (Minister for Agriculture).—Sir, I beg to move:

"That this Assembly do proceed to elect two members to the State Cotton Committee in pursuance of G.O. No. AF 53 CTN 57, dated 21st January 1958."

Mr. SPEAKER.—The question is:

"That this Assembly do proceed to elect two members to the State Cotton Committee in pursuance of G. O. No. AF 53 CTN 57, dated 21st January 1958."

The motion was adopted.

MYSORE VILLAGE PANCHAYATS AND LOCAL BOARDS BILL, 1958.

Motion to consider.

[Sri R. CHENNIGARAMAIAH (Minister for Local Self-Government) rose.]

Dr. R. NAGAN GOWDA (Hosur).—According to the old time table, today is the last working day. May I know whether there is any change or whether you are going to close today ?

Mr. SPEAKER.—We will sit for some time more and consider the present Bill before us and afterwards we will decide.

Sri J. B. MALLARADHYA (Nanjangud).—What is the number of days you are going to allot for this Bill ?

Mr. SPEAKER.—I am going to consider it now.

Dr. R. NAGAN GOWDA.—There were other Bills like the Co-operative Societies (Amendment) Bill and the Sugarcane Cess Bill which are also important.

Mr. SPEAKER.—We will see what happens.

Sri J. B. MALLARADHYA.—In regard to this Bill which is all important from various points of view, if the Speaker will kindly indicate the number of days to be allotted for it, then we will be able to fix up the number of people who will speak on it.

Mr. SPEAKER.—I will let you know shortly.

***Sri R. CHENNIGARAMAIAH.**—Sir, I beg to move:

"That the Mysore Village Panchayats and Local Boards Bill, 1958, be taken into consideration."

Mr. SPEAKER.—Motion moved:

"That the Mysore Village Panchayats and Local Boards Bill, 1958, be taken into consideration."

*ಶ್ರೀ ಆರ್. ಚೆನ್ನಿಗರಾಮಯ್ಯ.—ಅಧ್ಯಕ್ಷರೆ, ಬಹಳ ದಿವಸಗಳಿಂದಲೂ ಮಾನ್ಯ ಸದಸ್ಯರು ನಿರೀಕ್ಷಣೆ ಮಾಡುತ್ತಿದ್ದ ಸ್ಥಾನೀಯ ಸ್ವರಾಜ್ಯದ ಆಡಳಿತದ ಕರಡು ಮಸೂದೆ ಈ ದಿನ ತಮ್ಮ ಮುಂದಿದೆ. ಈ ಮಸೂದೆಯನ್ನು ತಮ್ಮಗಳ ಒಪ್ಪಿಗೆಗೆ ಇಡಲಿಕ್ಕೆ ಸಂತೋಷ ಪಡುತ್ತೇನೆ. ಮೊನ್ನೆತಾನೆ ಕೆಲವು ಜಿಲ್ಲಾ ಬೋರ್ಡುಗಳ ಕಾಲವನ್ನು ಹೆಚ್ಚಿಸುವುದಕ್ಕೆ ಸಂಬಂಧಪಟ್ಟ ಒಂದು ಮಸೂದೆಯನ್ನು ತಂದಿದ್ದಾಗ, ಸರ್ಕಾರದವರು ಇಂಥ ಒಂದು ಕಾನೂನನ್ನು ಈ ಸಾರಿ ತೆಗೆದುಕೊಂಡುಬರುತ್ತಾರೋ ಇಲ್ಲವೋ ಎಂಬ ಸಂಶಯವನ್ನು ಅನೇಕ ಮಾನ್ಯ ಸದಸ್ಯರು ಈ ಮನೆಯಲ್ಲೂ, ಮೇಲ್ಮನೆಯಲ್ಲೂ ವ್ಯಕ್ತಪಡಿಸಿದ್ದರು. ಆ ಸಂದರ್ಭದಲ್ಲಿ ಖಂಡಿತವಾಗಿ ಈ ಅಧಿವೇಶನದಲ್ಲೇ ಇಂಥ ಮಸೂದೆಯನ್ನು ತೆಗೆದುಕೊಂಡು ಬರುತ್ತೇವೆಂದು ವಾಗ್ದಾನ ಕೊಟ್ಟಿದ್ದೆ.

ಈಗ ತಮ್ಮಗಳಮುಂದೆ ಬಂದಿರತಕ್ಕದ್ದು ಬಹಳ ಪ್ರಾಮುಖ್ಯವಾದ ಬಿಲ್ಲು. ಹೊಸ ಪ್ರಾಂತ್ಯವಾದಮೇಲೆ ನಮ್ಮ ದೇಶದಲ್ಲಿ ಐದು ತರಹವಾದ ಕಾನೂನುಗಳು ಜಾರಿಯಲ್ಲಿವೆ. ಬೊಂಬಾಯಿ ಕರ್ನಾಟಕದಲ್ಲಿ ಲೋಕಲ್ ಬೋರ್ಡ್ ಆಕ್ಟ್ ಎನ್ನುವ ಕಾನೂನು ಇದೆ. ಆ ರೀತಿ ಈಗ ಅಲ್ಲಿ ಆಡಳಿತ ನಡೆಯುತ್ತಾ ಇದೆ. ಹೈದರಾಬಾದು ಕರ್ನಾಟಕದಲ್ಲಿ ಬೇರೆ ತರಹ ಕಾನೂನು ಇದೆ. ಸೌತ್ ಕೆನರಾದಲ್ಲಿ ಬೇರೆ ತರಹ ಇದೆ. ಕೊಡಗಿನಲ್ಲಿ ಮಾತ್ರ ಜಿಲ್ಲಾ ಬೋರ್ಡ್ ಆಡಳಿತ ಇಲ್ಲ. ಡಿಸ್ಟ್ರಿಕ್ಟ್ ಬೋರ್ಡ್ ಆಕ್ಟ್ ಇದ್ದರೂಸಹ ಡಿಸ್ಟ್ರಿಕ್ಟ್ ಬೋರ್ಡು ಜಾರಿಯಲ್ಲಿಲ್ಲ. ಆದ್ದರಿಂದ ಬಾಕಿ ನಾಲ್ಕು ಪ್ರಾಂತ್ಯಗಳಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ಆಡಳಿತ ಇದೆ ಮತ್ತು ಬೇರೆ ಬೇರೆ ಕಾನೂನುಗಳು ಜಾರಿಯಲ್ಲಿವೆ. ಒಂದೇ ಪ್ರಾಂತ್ಯವಾದ ಮೇಲೆ ಎಲ್ಲಾ ಆಡಳಿತಗಳನ್ನೂ ಒಟ್ಟಿಗೆ ಸೇರಿಸಿ ಒಂದೇಒಂದು ಕಾನೂನನ್ನು ತಯಾರುಮಾಡಿ ಹೊಸ ಮೈಸೂರು ದೇಶದಲ್ಲಿ ಜಾರಿಗೆ ಕೊಡುತ್ತೇವೆಂದು ಹೇಳಿದ್ದೆವು. ಈ ಬಗ್ಗೆ ಒಂದು ಕರಡು ಕಾನೂನನ್ನು ತಯಾರು ಮಾಡಲಿಕ್ಕೆ ಸ್ವಲ್ಪ ಕಾಲ ಆಯಿತು. ಆದರೂ ಹೆಚ್ಚುಕಾಲ ಆಗಲಿಲ್ಲ. ಹೊಸ ಪ್ರಾಂತವಾದದ್ದು 1956ನೆಯ ಇಸವಿ ನವೆಂಬರ್ ತಿಂಗಳಿನಲ್ಲಿ. ಅಲ್ಲಿಂದೀಚೆಗೆ 4-5 ತಿಂಗಳಿಗೆ ಜನರಲ್ ಎಲೆಕ್ಷನ್ ಬಂತು. ಅಲ್ಲಿಂದೀಚೆಗೆ ಒಂದು ವರ್ಷ ಕಾಲದಲ್ಲಿ ಆದಷ್ಟುಬೇಗ ಸರ್ವಪ್ರಯತ್ನ ಮಾಡಿ ಒಂದು ಕರಡು ಕಾನೂನನ್ನು ಮಾಡಿ ತಮ್ಮ ಮುಂದೆ ಇಟ್ಟಿದ್ದೇವೆ. ಇದರಲ್ಲಿ ಮುಖ್ಯವಾದಂಥ ಬದಲಾವಣೆ ಏನೆಂಬುದನ್ನು ಹೇಳುತ್ತಾ ಕೆಲವಂಶಗಳನ್ನು ಇಲ್ಲಿ ಪ್ರಸ್ತಾಪ ಮಾಡಬೇಕಾಗಿದೆ. ಇದುವರೆಗೂ ಹಳೆಯ ಮೈಸೂರಿನಲ್ಲಿ, ಬೊಂಬಾಯಿ ಕರ್ನಾಟಕದಲ್ಲಿ, ಹೈದರಾಬಾದ್ ಕರ್ನಾಟಕದಲ್ಲಿ, ಮದರಾಸು ಕರ್ನಾಟಕದಲ್ಲಿ ಜಿಲ್ಲಾ ಬೋರ್ಡುಗಳ ಆಡಳಿತವಿತ್ತು. ಜಿಲ್ಲಾ ಬೋರ್ಡ್ ಕಾನೂನು ಜಾರಿಯಲ್ಲಿತ್ತು. ಈಗ ತಮ್ಮ ಮುಂದೆ ನಾವು ಇಟ್ಟಿರತಕ್ಕಂಥ ಒಂದು ಕರಡು ಕಾನೂನು ಪ್ರಕಾರ ಜಿಲ್ಲಾ ಬೋರ್ಡುಗಳು ಇನ್ನುಮುಂದೆ ರದ್ದಾಗಿ ಅದಕ್ಕೆ ಪ್ರತಿಯಾಗಿ ಪ್ರತಿಯೊಂದು ತಾಲ್ಲೂಕಿನಲ್ಲೂ ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡ್‌ಗಳೆಂಬುವು ಜಾರಿಗೆ ಬರುತ್ತವೆ. ಇದಕ್ಕೆ ಕಾರಣವಾದರೂ ಏನೆಂಬುದನ್ನು ಸ್ವಲ್ಪ ತಿಳಿದುಕೊಳ್ಳಬೇಕಾಗಿದೆ. ಹಿಂದೆ, ಅನೇಕ ಮಾನ್ಯ ಸದಸ್ಯರಿಗೆ ನೆನಪಿರಬಹುದು, ಕೆಲವಾರು ವರ್ಷಗಳ ಹಿಂದೆ ಹಳೆಯ ಮೈಸೂರಿನಲ್ಲೂ ಸಹ ತಾಲ್ಲೂಕು ಬೋರ್ಡುಗಳು ಇದ್ದವು. ಬೊಂಬಾಯಿ ಕರ್ನಾಟಕದಲ್ಲೂ ಸಹ ಕೆಲವಾರು ವರ್ಷ ಇದ್ದವು. ಆದರೆ ಆಯಾಯ ಕಾಲಕ್ಕೆ ಸಾಕಾದಷ್ಟು ಅನುಭವಶಾಲಿಗಳು, ಆಡಳಿತವನ್ನು ನಡೆಸತಕ್ಕ ದಕ್ಷರು ಇಲ್ಲದೆ, ಆ ಕಾಲದಲ್ಲಿ ತಾಲ್ಲೂಕು ಬೋರ್ಡ್‌ಗಳು ಯಶಸ್ವಿಯಾಗಿ ನಡೆಯಲಿಲ್ಲ. ಆದಕಾರಣ ಅವನ್ನು ನಿಲ್ಲಿಸಿ ಮತ್ತೆ ಜಿಲ್ಲಾ ಬೋರ್ಡ್‌ಗಳನ್ನು ಮಾಡಿದರು. ಹಳೆಯ ಮೈಸೂರಿನಲ್ಲಿ ಎಲ್ಲಾ ಜಿಲ್ಲಾ ಬೋರ್ಡ್‌ಗಳೂ ಚೆನ್ನಾಗಿ ಕೆಲಸಮಾಡಿವೆ. ಮತ್ತು ಬೊಂಬಾಯಿ ಕರ್ನಾಟಕದಲ್ಲಿ ಈಗಲೂ ಬಹಳ ಚೆನ್ನಾಗಿ ಕೆಲಸ ಮಾಡುತ್ತಾ ಇವೆ. ಎಲ್ಲ ಕಡೆಯೂ ಜಿಲ್ಲಾ ಬೋರ್ಡ್‌ಗಳು ಚೆನ್ನಾಗಿ ಕೆಲಸ ಮಾಡಿಲ್ಲ ಎಂದು ಹೇಳುವ ಹಾಗಿಲ್ಲ. ಹೊಸ ಪ್ರಾಂತವಾದಮೇಲೆ 5 ಕಾನೂನುಗಳನ್ನೊಳಗೊಂಡ ಯುನಿಫಾರಂ ಲಾ, ಒಂದೇ ಒಂದು ಕಾನೂನನ್ನು ಜಾರಿಗೆ ಕೊಡಬೇಕೆಂದು ಯೋಚನೆ ಮಾಡಿದೆವು. ಈ ಸಂದರ್ಭದಲ್ಲಿ ಪ್ಲಾನಿಂಗ್ ಕಮಿಷನ್ ಸಹ ಎಲ್ಲ ಪ್ರಾಂತ್ಯದಲ್ಲೂ ಸರ್ವತೋಮುಖವಾದ ಅಭಿವೃದ್ಧಿ ಕಾರ್ಯಗಳನ್ನು ಕೈಕೊಳ್ಳಬೇಕೆಂದು ಹೇಳಿ ಎನ್. ಇ. ಎಸ್. ಬ್ಲಾಕ್‌ಗಳನ್ನು ಈಗಾಗಲೇ ಅನೇಕ ಕಡೆಗಳಲ್ಲಿ ಇಂಟ್ರೊಡ್ಯೂಸ್ ಮಾಡಿದೆ. ನಮ್ಮ ಮೈಸೂರು ದೇಶದಲ್ಲಿ ಸುಮಾರು 94 ಕಡೆಗಳಲ್ಲಿ ಎನ್. ಇ. ಎಸ್. ಬ್ಲಾಕ್‌ಗಳು ಜಾರಿಯಲ್ಲಿವೆ. ಪ್ಲಾನಿಂಗ್ ಕಮಿಷನ್‌ನವರು ಒಂದು ಸಬ್‌ಕಮಿಟಿ ಮಾಡಿದ್ದರು, ಅದಕ್ಕೆ ಬಲವಂತರಾಯ್ ಮೆಹತರವರು ಚೇರ್ಮನ್ ಆಗಿದ್ದರು. ಅವರು ಇಂಡಿಯಾ ದೇಶದ ಎಲ್ಲಾ ಪ್ರಾಂತ್ಯಗಳಿಗೂ ಹೋಗಿ ಆಯಾಯ ಸ್ಥಳದ ಪರಿಸ್ಥಿತಿಯನ್ನು ಆಯಾಯ ಸ್ಥಳದಲ್ಲಿರತಕ್ಕ ಕುಂದುಕೊರತೆಗಳನ್ನು ಪರಿಶೀಲನೆ ಮಾಡಿ ಯಾವತರಹವಾದ ಆಡಳಿತವನ್ನು ಜಾರಿಗೆ ಕೊಡಬೇಕೆಂಬ ಅಂಶವನ್ನು ಪರಿಶೀಲನೆಮಾಡಿದ್ದಾರೆ. ಅವರು ನಮ್ಮ ದೇಶಕ್ಕೆ ಬಂದಾಗ ಅವರ ಜೊತೆಗೆ ಚರ್ಚೆ ಮಾಡಿದೆವು. ಅವರು ತಾಲ್ಲೂಕು ಮಟ್ಟದಲ್ಲಿ ಒಂದು ಸಂಸ್ಥೆ ಇರತಕ್ಕದ್ದು ಬಹಳ ಉತ್ತಮ, ಅದು ಇದ್ದರೆ ಬಹ ಚೆನ್ನಾಗಿ, ಸಮರ್ಪಕವಾಗಿ, ಶೀಘ್ರವಾಗಿ ಕೆಲಸ ನಡೆಯುತ್ತದೆ ಎಂದು ಅಭಿಪ್ರಾಯವನ್ನು ವ್ಯಕ್ತಮಾಡಿದರು. ಎನ್. ಇ. ಎಸ್. ಬ್ಲಾಕ್ಸ್ ಇವತ್ತಿನ ದಿವಸ ಕೆಲವು ತಾಲ್ಲೂಕುಗಳಲ್ಲಿ ಎರಡು ಇವೆ, ಕೆಲವು ತಾಲ್ಲೂಕುಗಳಲ್ಲಿ ಒಂದು ಇದೆ. ಅವರು ಒಂದು ಜನಸಂಖ್ಯೆ ನಿಗದಿಮಾಡಿದ್ದಾರೆ. 15 ಸಾವಿರಕ್ಕೆ ಒಂದು, ಅದಕ್ಕೆ ಮೇಲ್ಪಟ್ಟು ಎರಡು ಎಂದು. ಈ ರೀತಿಯಾಗಿ ಇಟ್ಟುಕೊಂಡಿದ್ದಾರೆ. ಜಿಲ್ಲಾ ಬೋರ್ಡು ಇಟ್ಟುಕೊಂಡು, ತಾಲ್ಲೂಕು ಮಟ್ಟದಲ್ಲಿ ಡೆವಲಪ್‌ಮೆಂಟ್ ಕಮಿಟಿಯನ್ನು ಹಳೆಯ ಮೈಸೂರಿನಲ್ಲಿ ನಾಮಿನೇಟ್ ಮಾಡಿದ್ದೆವು. ಅದನ್ನು ಇಟ್ಟುಕೊಂಡು ಎನ್. ಇ. ಎಸ್. ಬ್ಲಾಕ್ಸ್ ಇಟ್ಟುಕೊಂಡ ಸಂದರ್ಭದಲ್ಲಿ

ಎರಡು ಸಂಸ್ಥೆ ಒಂದೇಕಾರ್ಯವನ್ನು ಮಾಡುವುದು ಸೂಕ್ತವಲ್ಲ, ಯಾವುದಾದರೂ ಒಂದು ಸಂಸ್ಥೆ ಇಟ್ಟು ಕೊಂಡು ಕೆಲಸಮಾಡಿ, ಅದಕ್ಕೆ ಎಲ್ಲ ಹಣದ ಸೌಕರ್ಯ ವನ್ನು ಕೊಟ್ಟರೆ ದಕ್ಷತೆಯಿಂದ, ಯಶಸ್ವಿಯಾಗಿ ಕೆಲಸ ಮಾಡಲಿಕ್ಕೆ ಚೆನ್ನಾಗಿರುತ್ತದೆ ಎಂದು ಹೇಳಿ ಇಡೀ ಇಂಡಿಯಾ ದೇಶದಲ್ಲಿ ಆ ರೀತಿ ಜಾರಿಯಲ್ಲಿ ತರಬೇಕೆಂದು ಪ್ಲಾನಿಂಗ್ ಕಮೀಷನ ಬಳವಂತರಾಯ್ ಕಮಿಟಿ ಯವರು ಸಲಹೆ ಮಾಡಿದರು. ಅಲ್ಲದೆ ಅಧಿಕಾರವನ್ನು ವಿಕೇಂದ್ರೀಕರಣಮಾಡಬೇಕೆಂಬ ಕೂಗು ಎಲ್ಲ ಕಡೆಯೂ ಇದೆ, ಎಲ್ಲ ಸದಸ್ಯರೂ ಒಪ್ಪುತ್ತಾರೆ. ಕೇಂದ್ರೀಕರಣವನ್ನು ಸ್ವಲ್ಪ ಸ್ವಲ್ಪ ಕಡಮೆಮಾಡಿ ತಾಲ್ಲೂಕುಗಳಿಗೆ, ಹಳ್ಳಿಗಳಿಗೆ ಈ ರೀತಿ ಅಧಿಕಾರ ಕೊಡಬೇಕೆಂದು ಎಲ್ಲರ ಅಭಿಮತ ಇದೆ. ಈ ದೃಷ್ಟಿ ಯಿಂದ ಬಲವಂತರಾಯ್ ಮೆಹತ ಕಮಿಟಿಯವರು ಬ್ಲಾಕ್ ಡೆವಲಪ್‌ಮೆಂಟ್ ಕಮಿಟಿಗೆ ಬಹಳ ಹೆಚ್ಚು ಅಧಿಕಾರ ಕೊಡಬೇಕೆಂದು ಹೇಳಿದರು. ಅವರು ಹೇಳಿರುವಂಥ ಎಲ್ಲ ಅಧಿಕಾರಗಳನ್ನು ಕೊಡಲಿಕ್ಕೆ ಇವತ್ತಿನ ದಿವಸ ನಾವು ಈ ಕರಡು ಶಾಸನವನ್ನು ಇಟ್ಟಿಲ್ಲ. ಏಕೆಂದರೆ ಬಹಳ ಜಾಸ್ತಿ ಅಧಿಕಾರ ಕೊಟ್ಟರೆ ಒಳ್ಳೆಯದಲ್ಲ, ಅನುಭವ ಪಡೆದು, ಪ್ರತಿಕ್ರಿಯೆ ನೋಡಿಕೊಂಡು ಮಾಡೋಣ ಎಂದುಹೇಳಿ ಸ್ವಲ್ಪಭಾಗ ಉಳಿಸಿಕೊಂಡು, ಕೆಲವನ್ನು ಬಿಟ್ಟುಬಿಟ್ಟಿದ್ದೇವೆ. ಈ ರೀತಿಯಾಗಿ ಈಗ ಜಿಲ್ಲಾ ಬೋರ್ಡ್‌ಗಳಿಗೆ ಬದಲಾಗಿ ತಾಲ್ಲೂಕು ಬೋರ್ಡ್‌ಗಳನ್ನು ಮಾಡಿದರೆ ಒಂದು ಜಿಲ್ಲೆಯಲ್ಲಿ ಆಗತಕ್ಕ ಕೆಲಸಗಳನ್ನೆಲ್ಲಾ ತಾಲ್ಲೂಕು ಬೋರ್ಡ್ ನಿರ್ವಹಿಸುತ್ತದೆ. ಇವತ್ತಿನ ದಿವಸ ವಿದ್ಯಾವಂತರು ಮತ್ತು ಜವಾಬ್ದಾರಿವಹಿಸಿ ಯಶಸ್ವಿಯಾಗಿ ತಾಲ್ಲೂಕು ಬೋರ್ಡಿನ ಆಡಳಿತವನ್ನು ನಡೆಸತಕ್ಕ ಶಕ್ತರು ಎಲ್ಲೆಲ್ಲೂ ಇದ್ದಾರೆ. ಸಾಲದ್ದಕ್ಕೆ ಹಿಂದೆ ಎಲ್ಲ ಸಹಾಯ ಇದ್ದರೂ ಸಾಕಾಗುತ್ತಿರಲಿಲ್ಲ ಎಂದು ಹೇಳಿದೆ. ಇವತ್ತಿನ ದಿವಸ ತಮ್ಮಮುಂದೆ ಇಟ್ಟಿರತಕ್ಕ ಕರಡು ಶಾಸನದ ಪ್ರಕಾರ ಇಡೀ ಇಂಡಿಯಾ ದೇಶದಲ್ಲಿ ಎಲ್ಲೂ ಇಲ್ಲದ ರೀತಿಯಲ್ಲಿ ನಾವು ಈ ಲ್ಯಾಂಡ್ ರೆವಿನ್ಯೂನಲ್ಲಿ 50 ಭಾಗದ ಆದಾಯವನ್ನು ತಾಲ್ಲೂಕು ಬೋರ್ಡು ಮತ್ತು ಪಂಚಾಯಿತಿಗಳಿಗೆ ಹಂಚ ಬೇಕೆಂದು ಇದ್ದೇವೆ. ಇದರಿಂದ ತಾಲ್ಲೂಕು ಬೋರ್ಡ್ ಮತ್ತು ಪಂಚಾಯಿತಿಗಳಿಗೆ ಸಾಕಾದಷ್ಟು ಹಣ ಸಿಕ್ಕುತ್ತದೆ ಮತ್ತು ಅವರ ಕೆಲಸಕಾರ್ಯಗಳನ್ನು ಮಾಡಲಿಕ್ಕೆ ಅನುಕೂಲವಾಗುತ್ತದೆ ಎಂಬ ಅಂಶ ಇದರಿಂದ ವೇದ್ಯವಾಗುತ್ತದೆ.

ಈಗ ಜಿಲ್ಲಾ ಬೋರ್ಡಿಗೆ ಬದಲಾಗಿ ತಾಲ್ಲೂಕು ಬೋರ್ಡ್ ಮತ್ತು ಪಂಚಾಯಿತಿಗಳು ಮಾಡಿರುವುದು ಹಳೆಯ ಮೈಸೂರಿನಲ್ಲಿ ಸಣ್ಣ ಪಂಚಾಯಿತಿಗಳು ಇವೆ. ಬೊಂಬಾಯಿ ಕರ್ನಾಟಕದಲ್ಲಿ ದೊಡ್ಡ ದೊಡ್ಡ ಹಳ್ಳಿಯಲ್ಲಿ ಪಂಚಾಯಿತಿಗಳಿವೆ. ಹೆಚ್ಚು ಜನಸಂಖ್ಯೆ ಇದೆ. ಹೈದರಾಬಾದ್‌ನಲ್ಲಿ ಇಲ್ಲ. ಮದರಾಸ್ ಪ್ರಾಂತದ ಅನೇಕ ಹಳ್ಳಿಗಳಲ್ಲಿ ಪಂಚಾಯಿತಿಯೇ ಇಲ್ಲ. ಇವತ್ತಿನ ದಿವಸ ಅನೇಕ ದೊಡ್ಡ ಹಳ್ಳಿಗಳಲ್ಲಿ ನೋಡಿದ್ದೇನೆ. ಪಂಚಾಯಿತಿ ಆಡಳಿತವಿಲ್ಲ, ರಸ್ತೆ ಇಲ್ಲ, ದೀಪ ಇಲ್ಲ, ಬೀದಿಗುಡಿಸುವವರು ಇಲ್ಲ. ಈ ರೀತಿ ಅವ್ಯವಸ್ಥೆ ಇದೆ. ಆದ್ದರಿಂದ ಈ ಕಾನೂನನ್ನು ಜಾರಿಗೆ ಕೊಟ್ಟ ನಂತರ ಎಲ್ಲಾ ಹಳ್ಳಿಗಳಲ್ಲೂ ಸಹ ಪಂಚಾಯಿತಿ ಮಾಡುವುದು ಮತ್ತು ಪಂಚಾಯಿತಿ ಆಡಳಿತವನ್ನು ಹಳ್ಳಿಯಲ್ಲಿ ವಾಸಮಾಡಲಿಕ್ಕೆ ಎಲ್ಲ ಜನರೂ ಅನುಭವಿಸುವುದು ಎನ್ನುವ ಉದ್ದೇಶವನ್ನೊಳಗೊಂಡ ಈ ಒಂದು ಕಾನೂನನ್ನು ತಂದಿದ್ದೇವೆ. ಹಳೆಯ ಮೈಸೂರಿನಲ್ಲಿ ಸುಮಾರು 12,460 ಪಂಚಾಯಿತಿಗಳಿವೆ. ಬೆಳಗಾಂ ಡಿವಿಜನ್‌ನಲ್ಲಿ 1,358 ಪಂಚಾಯಿತಿಗಳಿವೆ. ಗುಲ್ಬರ್ಗ ಡಿವಿಜನ್‌ನಲ್ಲಿ 315, ಸೌತ್ ಕೆನರಾ ಕೊಳ್ಳೇಗಾಲದಲ್ಲಿ 350 ಪಂಚಾಯಿತಿಗಳಿವೆ. ಜನಸಂಖ್ಯೆ ಯಾವರೀತಿ ಇದೆ ಎಂದರೆ :—

500ಕ್ಕಿಂತಲೂ ಕಡಮೆ ಜನಸಂಖ್ಯೆ ಇರತಕ್ಕ ಹಳ್ಳಿಗಳು ಎಂದರೆ	...	16,325
500 ರಿಂದ 1,000 ದವರೆಗೂ	...	5,638
1,000 ದಿಂದ 2,000 ದವರೆಗೂ	...	2,862
2,000ಕ್ಕೆ ಮೇಲ್ಪಟ್ಟು	...	1,072

ಈಗ ನಮ್ಮ ದೇಶದಲ್ಲಿ ಸುಮಾರು ಹಳೇ ಮೈಸೂರಿನಲ್ಲಿ 12,000 ಪಂಚಾಯಿತಿಗಳು ಇವೆ. ಮತ್ತು ಬೇರೆ ಭಾಗದ್ದು ಎಲ್ಲಾ ಸೇರಿಸಿದರೆ ಇಡೀ ದೇಶದಲ್ಲಿ 14 ಸಾವಿರ ಪಂಚಾಯಿತಿಗಳು ಆಗುತ್ತವೆ. ಕಾನೂನು ಪ್ರಕಾರ 1,500 ರಿಂದ 10,000 ದವರೆಗೂ ಪಂಚಾಯಿತಿ ಇರಬಹುದು ಎಂದು ಈಗ ತಂದಿರತಕ್ಕ ಈ ಕರಡು ಶಾಸನದಲ್ಲಿ ಇದೆ. ಇದರ ಪ್ರಕಾರ ಸುಮಾರು 8,000 ಮಾತ್ರ ಪಂಚಾಯಿತಿ ಆಗುತ್ತದೆ. ಸಣ್ಣ ಸಣ್ಣ ಹಳ್ಳಿಗೆಲ್ಲಾ, 50 ಜನ ಮತ್ತು 100 ಜನ ಇರತಕ್ಕ ಹಳ್ಳಿಗೂ ಸಹ ಹಳೆಯ ಮೈಸೂರಿನಲ್ಲಿ ಪಂಚಾಯಿತಿ ಇದ್ದು ಅವರಿಗೆ ಸಾಕಾದಷ್ಟು ಉತ್ಪನ್ನ ಇಲ್ಲದೆ ನಾನಾ ಅಭಿವೃದ್ಧಿ ಕಾರ್ಯಗಳನ್ನು ಮಾಡಲಿಕ್ಕೆ ಸಾಧ್ಯವಿಲ್ಲದೆ ಹತ್ತಾರು ವರ್ಷಗಳ ಹಿಂದೆ ಯಾವಸ್ಥಿತಿಯಿತ್ತೋ ಇವತ್ತಿಗೂ ಅದೇ ಸ್ಥಿತಿ ಇದೆ. ಸಾಕಾದಷ್ಟು ಹಣದ ಸೌಕರ್ಯವಿಲ್ಲದೆ ಸಣ್ಣ ಸಣ್ಣ ಪಂಚಾಯಿತಿಗಳು ಏನೂ ಕೆಲಸಕಾರ್ಯ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಪಂಚಾಯಿತಿಯ ಮಿತಿಯನ್ನು ದೊಡ್ಡದು ಮಾಡಬೇಕೆಂಬುದಾಗಿ ಯೋಚನೆಮಾಡಿದ್ದೇವೆ.

2-30 P.M.

ಮುಂಬಯಿ ಕರ್ನಾಟಕ ಪ್ರದೇಶದಲ್ಲಿ ದೊಡ್ಡ ದೊಡ್ಡ ಹಳ್ಳಿಗಳಿಗೆ ಅಂದರೆ 10 ಸಾವಿರದಿಂದ 17 ಸಾವಿರದವರೆಗೆ ಜನಸಂಖ್ಯೆಯಿರುವ ಹಳ್ಳಿಗಳಿಗೂ ಸಹ ಪಂಚಾಯಿತಿಗಳು ಇಲ್ಲ. ಈಗ ಈ ಕರಡು ಮಸೂದೆಯ ಪ್ರಕಾರ ಎಲ್ಲ ಪ್ರದೇಶಗಳಲ್ಲೂ ಏಕರೀತಿ ಯಾಗಿ 1,500 ರಿಂದ 10 ಸಾವಿರ ಜನಸಂಖ್ಯೆಯ ವರೆಗೆ ಇರತಕ್ಕ ಗ್ರಾಮಗಳಿಗೆಲ್ಲ ಪಂಚಾಯಿತಿ ಇರಬೇಕು ಎಂದು ಇದೆ. ಗ್ರೂಪ್ ಪಂಚಾಯಿತಿ ಬೇಕಾ ದರೂ ಮಾಡಬಹುದು ಎಂದು ಹೇಳಿದೆ. 10 ಸಾವಿರದ ಮೇಲೆ ಜನಸಂಖ್ಯೆಯು ಇದ್ದರೆ ಮುನಿಸಿಪಾಲಿಟಿ ಆಗಬಹುದು. ಒಂದೊಂದು ಪಂಚಾಯಿತಿಗೆ ಸುಮಾರು 1,500 ರೂಪಾಯಿ ಮೇಲ್ಪಟ್ಟು ಉತ್ಪತ್ತಿ ಇರುತ್ತದೆ, 5 ಸಾವಿರ, 6 ಸಾವಿರ, 10 ಸಾವಿರ ಹೀಗೆ ಹೆಚ್ಚಿನ ಜನಸಂಖ್ಯೆಯಿರುವ ಪಂಚಾಯಿತಿಗಳಿಗೆ ಇನ್ನು ಹೆಚ್ಚಿಗೆ ಉತ್ಪತ್ತಿ ಇರುತ್ತದೆ. ಆರ್ಥಿಕ ಸ್ಥಿತಿ ಯನ್ನು ಯೋಚನೆ ಮಾಡಿನೋಡಿದರೆ ಈಗಿರತಕ್ಕಂಥ ಪಂಚಾಯಿತಿಗಳನ್ನು ಬದಲಾವಣೆ ಮಾಡಬೇಕಾಗುತ್ತದೆ. ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಈಗ ಇರುತಕ್ಕಂಥ ಉತ್ಪತ್ತಿ ಎಷ್ಟು ಎಂಬುದನ್ನು ಗಮನಕ್ಕೆ ತೆಗೆದು ಕೊಳ್ಳಬೇಕಾಗುತ್ತದೆ. ಇನ್ನು ಕೆಲವರಲ್ಲಿ ತಾಲ್ಲೂಕಾ ಬೋರ್ಡು ಮಾಡುವದರಿಂದ ಖರ್ಚು ಜಾಸ್ತಿಯಾಗುತ್ತದೆ; ಎಲ್ಲ ತಾಲ್ಲೂಕುಗಳಿಗೆ ಎಷ್ಟು ಅನುಕೂಲವಾಗಬೇಕೋ ಅಷ್ಟು ಆಗುವದಿಲ್ಲ ಎಂಬುದೊಂದು ಅನುಮಾನ ಇದೆ. ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಇರತಕ್ಕಂಥ ಉತ್ಪತ್ತಿಯ ಪ್ರಮಾಣದ ಅಂಕಿ ಅಂಶಗಳನ್ನು ಕೊಡುತ್ತೇನೆ.

(ಶ್ರೀ ಆರ್. ಚೆನ್ನಿಗರಾಮಯ್ಯ)

Name of District	*Income of District Board*	*Income of Taluk Board*
	Rs.	Rs.
Bangalore	5,86,000	55,000
Chitaldrug	4,61,000	51,000
Kolar	3,75,000	34,000
Tumkur	3,94,000	39,000
Mandya	5,96,000	85,000
Hassan	5,45,000	68,000
Chikmagalur	3,69,000	52,000
Shimoga	3,31,000	36,000
Bellary	12,59,000	1,79,000
Belgaum	12,92,000	one lakh & odd.
Bijapur	11,77,000	...
Dharwar	14,48,000	...
North Canara	6,53,000	...
South Canara including Kasargod ...	27,18,000	...
Gulbarga	3,48,000	...
Raichur	3,25,000	...
Bidar	3,35,000	...

ಒಂದು ಜಿಲ್ಲೆಯ ಉತ್ಪತ್ತಿಯನ್ನು ಪ್ರತಿಯೊಂದು ತಾಲ್ಲೂಕಿಗೂ ಭಾಗಮಾಡಿದರೆ ಅದು ಕಡಿಮೆ ಬರುತ್ತದೆ. ಇದು ಎಲ್ಲರಿಗೂ ಗೊತ್ತಿರುವ ವಿಷಯ. ಜಿಲ್ಲಾ ಬೋರ್ಡಿನ ಉತ್ಪತ್ತಿ ಈಗ ಎಲ್ಲ ತಾಲ್ಲೂಕುಗಳಿಗೆ ಸಮನಾಗಿ ವಿನಿಯೋಗವಾಗುತ್ತಿಲ್ಲ ಎಂಬ ಕೂಗು ಇದೆ. ಇದನ್ನು ಎಲ್ಲರೂ ಮನಗಂಡಿದ್ದಾರೆ. ಒಂದು ತಾಲ್ಲೂಕಿನಲ್ಲಿ ಜಾಸ್ತಿ ಇನ್ನೊಂದು ತಾಲ್ಲೂಕಿನಲ್ಲಿ ಕಡಮೆ ಖರ್ಚಾಗಬಹುದು. ಅಧ್ಯಕ್ಷರು, ಉಪಾಧ್ಯಕ್ಷರು, ಪ್ರಭಾವಶಾಲಿ ಸದಸ್ಯರು ಯಾವ ಯಾವ ತಾಲ್ಲೂಕುಗಳಿಂದ ಬಂದಿರುತ್ತಾರೋ ಆ ತಾಲ್ಲೂಕಿಗೆ ಹೆಚ್ಚಾಗಿ ಹಣ ಖರ್ಚು ಆಗುತ್ತದೆ, ಬೇರೆ ತಾಲ್ಲೂಕುಗಳನ್ನು ಅವರು ಉದಾಸೀನ ಮಾಡುತ್ತಾರೆ ಎಂಬ ಕೂಗು ಕೇಳುತ್ತಿದ್ದೇವೆ. ಇನ್ನು ಮುಂದೆ ತಾಲ್ಲೂಕು ಬೋರ್ಡು ಆಗುವುದರಿಂದ ಆ ತಾಲ್ಲೂಕಿಗೆ ಖಂಡಿತವಾಗಿ ಹಣ ಬಂದೇಬರುತ್ತದೆ. ತಾಲ್ಲೂಕು ಬೋರ್ಡಿಗೆ ದೊರೆಯುತಕ್ಕ ಹಣವನ್ನು ಆ ತಾಲ್ಲೂಕಿನ ಪ್ರತಿನಿಧಿಗಳು ಜವಾಬ್ದಾರಿಯನ್ನು ವಹಿಸಿಕೊಂಡು ಉಪಯೋಗಿಸಿ ಆಡಳಿತೆಯನ್ನು ನಡೆಸಿ ಸಮರ್ಪಕವಾಗಿ, ದಕ್ಷತೆಯಿಂದ ಅನುಕೂಲಗಳನ್ನು ಮಾಡಿ ಕೊಡುತ್ತಾರೆ. ಸಮರ್ಪಕವಾಗಿ ಹಣ ಹಂಚಲೂ ಸಹ ಆಗುತ್ತದೆ. ಆಯಾಯ ಪ್ರತಿನಿಧಿಗಳಿಗೆ ತಮ್ಮ ತಮ್ಮ ತಾಲ್ಲೂಕಿಗೆ ಎಲ್ಲ ಸೌಕರ್ಯಗಳನ್ನು ಒದಗಿಸಿಕೊಡಲು ಅನುಕೂಲವಾಗುತ್ತದೆ. ಇದನ್ನು ದೀರ್ಘವಾಗಿ ಯೋಚನೆಮಾಡಿ ತಾಲ್ಲೂಕು ಬೋರ್ಡು ಮಾಡುವುದು ಸರಿ ಎಂದು ಒಂದು ತೀರ್ಮಾನಕ್ಕೆ ಬಂದು ಈಗ ತಮ್ಮೆಲ್ಲರ ಮುಂದೆ ಈ ಮಸೂದೆಯನ್ನು ಇಟ್ಟಿದ್ದೇವೆ.

ಡಾ॥ ಆರ್. ನಾಗನಗೌಡ (ಹೊಸಪೇಟೆ).—ಲ್ಯಾಂಡ್ ರೆವೆನ್ಯೂ ಮೂಲಕ ಎಷ್ಟು ಹಣ ಕೊಡಲಾಗುವುದು ಎಂಬುದಕ್ಕೆ ಅಂಕಿ ಅಂಶಗಳನ್ನು ಹೇಳಲಿಲ್ಲ. ಬಳ್ಳಾರಿ ಜಿಲ್ಲಾ ಬೋರ್ಡಿಗೆ 12 ಲಕ್ಷ ರೂಪಾಯಿ ಉತ್ಪತ್ತಿ ಇದೆ. ಲ್ಯಾಂಡ್ ರೆವೆನ್ಯೂವಿನ ಶೇಕಡ 15 ಕೊಟ್ಟರೆ ಎಷ್ಟು ಆಗುತ್ತದೆ ಎಂಬುದಕ್ಕೆ ಅಂಕಿಅಂಶಗಳನ್ನು ಹೇಳಲಿಲ್ಲ.

ಶ್ರೀ ಆರ್. ಚೆನ್ನಿಗರಾಮಯ್ಯ.—ಈಗ ಡಾ॥ ನಾಗನಗೌಡರು ಏನು ಕೇಳಿದರೋ ಅದನ್ನು ಆಮೇಲೆ ಹೇಳುತ್ತೇನೆ. ಮೊದಲು ಲ್ಯಾಂಡ್ ರೆವೆನ್ಯೂವಿನ ಶೇಕಡ 15 ಕೊಟ್ಟು ಇನ್ನೂ ಹೆಚ್ಚಿಗೆ ಶೇಕಡ 10 ಕೊಡುವದರಿಂದ ಅದು 20 ರಿಂದ ಶೇಕಡ 25 ಒಂದೊಂದು ಪಂಚಾಯಿತಿಗೆ ಆಗುತ್ತದೆ. ಇದರಲ್ಲಿ ಹಳೆಯ ಮೈಸೂರನ್ನು ಸೇರಿಸಿದ್ದೇವೆ. ಹಿಂದಿನ ಆಕ್ಟ್ ಪ್ರಕಾರ ಹಳೆಯ ಮೈಸೂರಿನಲ್ಲಿ ಶೇಕಡ $6\frac{1}{4}$ ಇತ್ತು. ಪ್ರತಿಯೊಂದು ಜಿಲ್ಲೆಗೆ ಉತ್ಪತ್ತಿ ಎಷ್ಟು ಆಗುತ್ತದೆ. ಹೊಸದಾಗಿ ಲ್ಯಾಂಡ್ ರೆವೆನ್ಯೂ ಎಷ್ಟು ಆಗುತ್ತದೆ, ಎಂಬುದನ್ನು ತಮ್ಮ ಮುಂದೆ ಇಟ್ಟಿಲ್ಲ. ತಾಲ್ಲೂಕು ಬೋರ್ಡುಗಳನ್ನು ಮಾಡುವುದರಿಂದ ಪ್ರಜೆಗಳಿಗೆ ಹೆಚ್ಚಿನ ಪ್ರಯೋಜನವಾಗುತ್ತದೆ ಎಂಬ ಸದುದ್ದೇಶದಿಂದ ಈರೀತಿ ಮಾಡಲಾಗಿದೆ. ಒಟ್ಟು ಜಮೀನು ಕಂದಾಯದ ಅರ್ಧದಷ್ಟು ಕೊಡಲಾಗುವುದು. ಶೇಕಡ 50 ಲ್ಯಾಂಡ್ ರೆವೆನ್ಯೂನಲ್ಲಿ ಆಯಾ ಪಂಚಾಯಿತಿಗಳ ಮತ್ತು ತಾಲ್ಲೂಕುಗಳ ಕಂದಾಯದ ಶೇಕಡ 15 ಆಯಾ ಪಂಚಾಯಿತಿಗಳಿಗೂ, ಶೇಕಡ 15 ಆಯಾ ತಾಲ್ಲೂಕು ಬೋರ್ಡುಗಳಿಗೆಂದೂ ಉಳಿದಿರತಕ್ಕಂಥ ಒಟ್ಟು ರಾಜ್ಯದ ಭೂ ಕಂದಾಯದ ಶೇಕಡ 20ರಲ್ಲಿ ಶೇಕಡ 10ನ್ನು ಪಂಚಾಯಿತಿಗಳಿಗೂ ಮತ್ತು ಶೇಕಡ 10ನ್ನು ತಾಲ್ಲೂಕು ಬೋರ್ಡುಗಳಿಗೆ ಕೊಡಲಾಗುವುದು.

Sri J. B. MALLARADHYA (Nanjangud).—There is a distinction. It gives a wrong impression. It is 15 per cent of the land revenue of the taluk and 10 per cent of the land revenue for each panchayat. If you say 15 per cent of the total land revenue . . . . .

Sri R. CHENNIGARAMIAH.—15 per cent of the land revenue of that particular village will be assigned to the

village panchayat. 15 per cent of the land revenue of the taluk will, in the first instance, be assigned to the Taluk Board. The remaining 20 per cent will be retained by the Government. ಕೆಲವು ತಾಲ್ಲೂಕುಗಳಲ್ಲಿ ಉತ್ಪನ್ನ ಬಹಳ ಕಡಮೆ ಯಾಗಿರುತ್ತದೆ. ಹಾಗೂ ಕೆಲವು ತಾಲ್ಲೂಕುಗಳಲ್ಲಿ ಉತ್ಪನ್ನ ಹೆಚ್ಚು ಬರುತ್ತದೆ. Dry lands ಇದ್ದಲ್ಲಿ ಕಡಮೆ ಉತ್ಪತ್ತಿ ಇರುತ್ತದೆ. ಅಂಥಲ್ಲಿ ಅಭಿವೃದ್ಧಿ ಕಾರ್ಯಕ್ಕಾಗಿ ಹಣ ಬೇಕಾಗುವುದು. ಶೇಕಡ 10 ರಷ್ಟು ತಾಲ್ಲೂಕು ಬೋರ್ಡುಗಳಿಗೆ ಕೊಡುತ್ತೇವೆ. ಸ್ಟ್ಯಾಟ್ಯುಟರಿ ಬಾಡಿಯಿಂದ ತಾಲ್ಲೂಕು ಬೋರ್ಡ್, ಪಂಚಾಯಿತಿಗಳಿಗೆ ಶೇಕಡ 20 ಹಂಚಲಾಗುವುದು. ಕೆಲವೇ ದಿವಸಗಳಲ್ಲಿ ರೀ ಸೆಟಲ್‌ಮೆಂಟು ತೆಗೆದು ಕೊಂಡು ಕಂದಾಯ ಉತ್ಪತ್ತಿ ಡಬ್ಬಲ್ ಆಗುತ್ತದೆ; ಎರಡರಷ್ಟು ಅಂದರೆ 4 ಕೋಟಿ ರೂಪಾಯಿ ಆಗುತ್ತದೆ. ಇದರ ಮೂಲಕ ತಾಲ್ಲೂಕು ಬೋರ್ಡು ಪಂಚಾಯಿತಿಗಳ ಆರ್ಥಿಕಸ್ಥಿತಿ ಬಹಳ ಉತ್ತಮವಾಗುತ್ತದೆ.

ಶ್ರೀ ಕೆ. ಕೆಂಚಪ್ಪ (ಹಿರಿಯೂರು).—ಗ್ರಾಮ ಪಂಚಾಯಿತಿ, ತಾಲ್ಲೂಕು ಬೋರ್ಡುಗಳು ಕೆಲಸ ಮಾಡಲು ಸಿಬ್ಬಂದಿ ಬೇಕಾಗುತ್ತದೆ. ಈಗಿನ ಉತ್ಪತ್ತಿಯ ಜೊತೆಗೆ ಲ್ಯಾಂಡ್ ರೆವೆನ್ಯೂ ಸಹಿತ ಶೇಕಡ 25 ಕೊಡುತ್ತೀರಿ. ಈ ಶೇಕಡ 25 ಸೇರಿಸಿಕೊಂಡು ಒಟ್ಟು ಉತ್ಪತ್ತಿ ತೆಗೆದುಕೊಂಡರೆ, ಸರಿಸಮವಾಗಿ ಸಿಬ್ಬಂದಿಗಾಗಿ ಎಷ್ಟು ಖರ್ಚಾಗುತ್ತದೆ ? ಸಿಬ್ಬಂದಿಗಾಗಿ ಖರ್ಚುಮಾಡಿ ಉಳಿತಾಯವಾದ ಹಣದಲ್ಲಿ ಸಾರ್ವಜನಿಕ ಹಿತದ ಕೆಲಸಕಾರ್ಯಗಳಿಗಾಗಿ ಒಂದು ತಾಲ್ಲೂಕಿಗೆ ಎಷ್ಟು ದುಡ್ಡು ಆಗುತ್ತದೆ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಶ್ರೀ ಕೆಂಚಪ್ಪನವರು ಹೇಳಿದ್ದನ್ನು ನಾನು ಊಹೆ ಮಾಡುತ್ತೇನೆ. Accurate ಆಗಿ ಹೇಳಲು ಬರುವದಿಲ್ಲ. ಚರ್ಚೆಗೆ ಉತ್ತರ ಕೊಡುವಾಗ ಈ ವಿಷಯವನ್ನು ಹೇಳುತ್ತೇನೆ. ಒಂದು ತಾಲ್ಲೂಕು ತೆಗೆದುಕೊಂಡು work out ಮಾಡಿ accurate ಆಗಿ ಹೇಳುತ್ತೇನೆ. ಸರ್ವೆ ಸಾಧಾರಣವಾಗಿ ಒಂದು ತಾಲ್ಲೂಕಿಗೆ 2 ಲಕ್ಷ ರೂಪಾಯಿ ಉತ್ಪತ್ತಿ ಇರಬಹುದು. 12 ಸಾವಿರ ದಿಂದ 15 ಸಾವಿರ ರೂಪಾಯಿಗಳವರೆಗೆ ಎಸ್ಟಾಬ್ಲಿಷ್ ಮೆಂಟಿಗಾಗಿ ಖರ್ಚಾಗುತ್ತದೆ. 15 ಸಾವಿರ ರೂಪಾಯಿ ಮೇಲ್ಪಟ್ಟು ಈ ಖರ್ಚು ಹೋಗಲು ಸಾಧ್ಯವಿಲ್ಲ.

ಶ್ರೀ ಕೆ. ಕೆಂಚಪ್ಪ.—ಮೊದಲಿದ್ದ ಆಬ್ಲಿಗೇಟರಿ ಮತ್ತು ಡಿಸ್ಕ್ರಿಷನರಿ ಡ್ಯೂಟೀಸ್ ಜೊತೆಗೆ ಈಗ ಸ್ವಲ್ಪ ಹೆಚ್ಚು ಕೆಲಸವಿದೆ. ಈ ದೃಷ್ಟಿಯಿಂದಲೂ ಸಹ ಯಾವರೀತಿ ಜನಹಿತಕಾರಿ ಕೆಲಸವಾಗುತ್ತದೆ ಎಂಬು ದನ್ನು ನೋಡಬೇಕು.

ಶ್ರೀ ಆರ್. ಚೆನ್ನಿಗರಾಮಯ್ಯ.—ಹೆಚ್ಚು ಕೆಲಸ ವಿದ್ದರೆ ನಮಗೆ ಇನ್ನೂ ಹೆಚ್ಚು ಹಣ ಬರುತ್ತದೆ. ಮೈನರ್ ಕೆರೆಗಳ ರಕ್ಷಣೆ ವಗೈರೆ ಬಾಬತು 25 ಲಕ್ಷ ರೂಪಾಯಿಗಳು, ಪ್ರೈಮರಿ ಸ್ಕೂಲುಗಳ ಬಾಬತು 6 ಲಕ್ಷ ರೂಪಾಯಿಗಳು, ಎಕ್ಸೈಜು ಬಾಬಿಗೆ ಸಂಬಂಧಪಟ್ಟ 5 ಲಕ್ಷ ರೂಪಾಯಿಗಳು ಈ ವೆಚ್ಚಗಳಿಂದ ರಾಜ್ಯ ಸರ್ಕಾರದವರು ಬಿಡುಗಡೆ ಹೊಂದುವರೆಂದು ಅಂಕಿ ಅಂಶಗಳನ್ನು ಕೊಟ್ಟಿದೆ. ಜಾಸ್ತಿ ಲ್ಯಾಂಡ್ ರೆವೆನ್ಯೂ ಬರುತ್ತದೆ. ಈ ರೀತಿಯ ಮಾರ್ಪಾಡಿನಿಂದ ಪಂಚಾಯಿತಿಗಳಿಗಾಗಲಿ ಅಥವಾ ತಾಲ್ಲೂಕು ಬೋರ್ಡುಗಳಿಗಾಗಲಿ ಯಾವರೀತಿಯ ಧಕ್ಕೆಯೂ ಬರುವುದಿಲ್ಲ. ಅವು ಸರ್ವವಿಧದಲ್ಲೂ ಉತ್ತಮವಾಗುತ್ತವೆ. ಎನ್.ಇ.ಎಸ್. ಬ್ಲಾಕುಗಳಿರುವ ಕಡೆ ಬೇಕಾದಷ್ಟು ಸಿಬ್ಬಂದಿಯಿದೆ. ಈ ಎರಡೂ ದ್ವಂದ್ವವಾಗಿ ಕೆಲಸಮಾಡುತ್ತವೆ; ಪ್ರತ್ಯೇಕ ಸಿಬ್ಬಂದಿ ಬೇಕಾಗಿಲ್ಲ. ಅಂದಮೇಲೆ ಖರ್ಚು ಬಹಳ ಕಡಮೆಯಾಗುತ್ತದೆ. ಇದೆಲ್ಲಾ ಸಲಕರಣೆಯಿರುವುದರಿಂದ ಸಮರ್ಪಕವಾಗಿ ಕೆಲಸವಾಗುತ್ತದೆ. ಈ ದೃಷ್ಟಿಯಿಂದ ಸರ್ವವಿಧದಲ್ಲೂ ತಾಲ್ಲೂಕು ಬೋರ್ಡ್ ಮತ್ತು ಪಂಚಾಯಿತಿಗಳ ಸ್ಥಿತಿ ಉತ್ತಮ ಪಡುತ್ತದೆ ಎಂದು ಭಾವಿಸಲಾಗಿದೆ.

ಎಲೆಕ್ಷನ್ ವಿಚಾರ. ಪಂಚಾಯಿತಿಗಳಿಗೆ ಅಡಲ್ಟ್ ಫ್ರಾಂಚೈಸು ಪ್ರಕಾರ ಚುನಾವಣೆ ಮಾಡಬೇಕೆಂದು ಮಸೂದೆಯಲ್ಲಿ ಹೇಳಿದೆ.

Dr. R. NAGAN GOWDA.—Before the Hon'ble Minister proceeds, I would request him to give approximate figures for each district as to the amounts the local bodies will be able to get. The Government have the necessary statistics and they can give us this information.

Sri R. CHENNIGARAMAIAH.—I have already undertaken to give figures. I may not be able to give for all districts, but I will give you figures in respect of a few taluks. ಪಂಚಾಯಿತಿ ಕಾನ್‌ಸ್ಟಿಟ್ಯೂಷನ್ ವಿಚಾರದಲ್ಲಿ ಒಂದೆರಡು ಅಂಶ ಹೇಳಬೇಕಾಗಿದೆ. ಪಂಚಾಯಿತಿಗಳಿಗೆ ವಯಸ್ಕರ ಮತದಾನ ಪದ್ಧತಿಮೇಲೆ ಚುನಾವಣೆ ನಡೆಯುವುದು. ಪಂಚಾಯಿತಿಯ ಸದಸ್ಯರ ಬಲ ಹತ್ತರಿಂದ ಇಪ್ಪತ್ತರವರೆಗೆ ಇರಬಹುದು. ಜನಸಂಖ್ಯೆ ಆಧಾರದಮೇಲೆ ಬಲ ಹೆಚ್ಚು ಕಡಮೆಯಾಗುತ್ತದೆ. ಇದಾದನಂತರ ತಾಲ್ಲೂಕು ಬೋರ್ಡ್ ರಚನೆಯ ವಿಚಾರ ಹೇಗೆಂಬುದು ತಮಗೆ ಗೊತ್ತಿದೆ. ಅದಕ್ಕೆ ಅಪ್ರತ್ಯಕ್ಷ ಚುನಾವಣೆ ನಡೆಯುವುದು. ಪಾರ್ಲಿಮೆಂಟ್, ಅಸೆಂಬ್ಲಿ, ಪಂಚಾಯಿತಿ, ಮುನಿಸಿಪಾಲಿಟಿ, ತಾಲ್ಲೂಕು ಬೋರ್ಡು ಇವುಗಳಿಗೆಲ್ಲಾ ವಯಸ್ಕರ ಮತದಾನ ನಡೆದರೆ ತುಂಬ ಹಣ ವೆಚ್ಚವಾಗುತ್ತದೆ. ಆದ್ದರಿಂದ ತಾಲ್ಲೂಕು ಬೋರ್ಡುಗಳಿಗೆ ಅಪ್ರತ್ಯಕ್ಷ ಚುನಾವಣೆಯನ್ನು ಗ್ರಾಮಪಂಚಾಯಿತಿ ಸದಸ್ಯರಿಂದ ಏರ್ಪಡಿಸಿ ಈ ಬಾಬಿನಲ್ಲಿ ಉಳಿಯುವ ಹಣವನ್ನು ಅಭಿವೃದ್ಧಿ ಕಾರ್ಯಗಳಿಗೆ ಖರ್ಚುಮಾಡಬೇಕೆಂದು ಯೋಚಿಸಲಾಗಿದೆ.

Sri GAJANAN PANDIT (Mangalore II) —Simultaneous election can be held for Taluk Boards as well as Panchayats just as elections held for Parliament and Assemblies.

ಶ್ರೀ ಆರ್. ಚೆನ್ನಿಗರಾಮಯ್ಯ.—We will examine all these aspects. ಇದೆಲ್ಲಾ ಪರಿಶೀಲನೆಮಾಡಿ ಸೈಮಲ್ಟೇನಿಯಸ್ಸಾಗಿ ಮಾಡಿದರೆ ಕನ್‌ಫ್ಯೂಸ್ ಆಗುತ್ತದೆ, ಖರ್ಚು ಬಹಳವಾಗುತ್ತದೆ. ಪಂಚಾಯಿತಿಗಳಿಗೆ ಡೈರೆಕ್ಟ್ ಎಲೆಕ್ಷನ್ ಇದೆ, ಅದೇ ಪಂಚಾಯಿತಿ ಸದಸ್ಯರು ಇನ್‌ಡೈರೆಕ್ಟಾಗಿ ತಾಲ್ಲೂಕು ಬೋರ್ಡಿಗೆ ಚುನಾವಣೆ ಮಾಡುವುದರಿಂದ ತೊಂದರೆಯಿಲ್ಲ ಎಂದು ವ್ಯವಸ್ಥೆ ಮಾಡಿದ್ದೇವೆ.

ಶ್ರೀ ಎ. ಭೀಮಪ್ಪನಾಯಕ್ (ಚಳ್ಳಕೆರೆ).—ಶ್ರೀ ಗಜಾನನ ಪಂಡಿತ್‌ಅವರು ಹೇಳಿದ ವಿಷಯ ಮುಖ್ಯವಾಗಿ ಆಲೋಚನೆ ಮಾಡಬೇಕಾದದ್ದು. ಗ್ರಾಮ ಪಂಚಾಯಿತಿ ಚುನಾವಣೆ ನಡೆಯುವಾಗಲೇ ತಾಲ್ಲೂಕು ಬೋರ್ಡುಗಳಿಗೆ ಡೈರೆಕ್ಟ್ ಎಲೆಕ್ಷನ್ ಆದರೆ ಅದಕ್ಕೊಂದು ಓಟು, ಇದಕ್ಕೊಂದು ಓಟು ಕೊಟ್ಟರಾಯಿತು. ಕನ್‌ಫ್ಯೂಷನ್ ಏನೂ ಆಗುವುದಿಲ್ಲ. ಪಾರ್ಲಿಮೆಂಟ್ ಮತ್ತು ಲೆಜಿಸ್ಲೇಚರ್ ಚುನಾವಣೆಯಾಗುವಾಗ ಯಾವ ಕನ್‌ಫ್ಯೂಷನ್ ಆಗದಿರುವ ಹಾಗೆ ಇರುತ್ತದೆ. ಅದರ ಹಾಗೆ ಇದನ್ನು ಆಲೋಚಿಸಬೇಕಾದದ್ದು ಅವಶ್ಯಕ.

ಶ್ರೀ ಆರ್. ಚೆನ್ನಿಗರಾಮಯ್ಯ.—ಈಗ ಕರಡು ಶಾಸನ ತಮ್ಮ ಮುಂದಿದೆ. ತಮ್ಮ ಅಭಿಪ್ರಾಯ ಪರಿಶೀಲನೆಮಾಡುತ್ತೇವೆ. ಎಲ್ಲರಿಗೂ ಸೂಕ್ತವಾಗುವ ರೀತಿಯಲ್ಲಿ ತೀರ್ಮಾನಮಾಡಬೇಕಾಗುತ್ತದೆ. ಈ ಮಸೂದೆ ಸೆಲೆಕ್ಟ್ ಕಮಿಟಿಗೆ ಹೋಗುತ್ತದೆ. ಅಲ್ಲಿ ಬೇಕಾದ ಬದಲಾವಣೆ ಮಾಡುವುದಕ್ಕೆ ಅವಕಾಶವಿದೆ. ದೇಶಕ್ಕೆ ಯಾವುದು ಮುಖ್ಯವೋ ಆ ತೀರ್ಮಾನವನ್ನು ಸಭೆ ಕೈಕೊಳ್ಳಬಹುದು. ಸಮಿತಿಯಿಂದ ಮಸೂದೆ ವಾಪಸು ಬಂದಮೇಲೆ ತಮ್ಮ ಮುಂದೆ ಬರುತ್ತದೆ. ಆಗ ಬೇಕಾದರೆ ತಿದ್ದುಪಡಿ ಮಾಡುವುದಕ್ಕೆ ಅವಕಾಶವಿದೆ. ಈ ವಿಚಾರದಲ್ಲಿ ಈಗ ನಾನು ಹೆಚ್ಚಾಗಿ ಹೇಳಬೇಕಾಗಿಲ್ಲ. ಈ ಸಂದರ್ಭದಲ್ಲಿ ತಾಲ್ಲೂಕು ಬೋರ್ಡು ಮತ್ತು ಗ್ರಾಮ ಪಂಚಾಯಿತಿಗಳಿಗಿರುವ ಅಧಿಕಾರ ಹೇಳಿದ್ದಾಗಿದೆ. ಪಂಚಾಯಿತಿ ಮತ್ತು ತಾಲ್ಲೂಕು ಬೋರ್ಡು ಕೆಲಸಕಾರ್ಯಗಳ ಬಗ್ಗೆ ಭಿನ್ನಾಭಿಪ್ರಾಯ ಬಂದರೆ ಸರಿಪಡಿಸುವುದಕ್ಕೆ ಕೋ-ಆರ್ಡಿನೇಟಿಂಗ್ ಬಾಡಿ ಇರಲೆಂದು ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್ ಇರಬೇಕೆಂದು ಹೇಳಿದ್ದೇವೆ. ಅದಕ್ಕೆ ಚುನಾಯಿತ ಸದಸ್ಯರು ಬೇಕಾಗಿಲ್ಲ, ಅಲ್ಲಿನ ಸದಸ್ಯರಿಗೆ ಅಧಿಕಾರವಿಲ್ಲ. ಕೆಲಸ ಸಮರ್ಪಕವಾಗಿ ನಡೆಯಲಿ, ಸಹಕಾರವಿರಲಿ, ತೊಂದರೆ ಬಂದರೆ ಪರಿಹಾರ ಮಾಡಲಿ ಎಂದು ಡಿಸ್ಟ್ರಿಕ್ಟ್ ಲೆವೆಲ್‌ನಲ್ಲಿ ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್ ಇರಬೇಕೆಂದು ಮಾಡಿದ್ದೇವೆ. ಅದರಲ್ಲಿ ತಾಲ್ಲೂಕು ಬೋರ್ಡುಗಳ ಅಧ್ಯಕ್ಷರು, ಪಾರ್ಲಿಮೆಂಟ್ ಸದಸ್ಯರು, ಅಸೆಂಬ್ಲಿ ಸದಸ್ಯರು, ಜಿಲ್ಲೆಗಳಲ್ಲಿರುವ ಇಲಾಖಾ ಮುಖ್ಯಾಧಿಕಾರಿಗಳು ಸದಸ್ಯರಾಗಿರುವರು. ಅದಕ್ಕೆ ಡೆಪ್ಯುಟಿ ಕಮಿಷನರು ಅಧ್ಯಕ್ಷರು. ತಕರಾರು ಬಂದರೆ, ವ್ಯತ್ಯಾಸವಿದ್ದರೆ ಅದನ್ನು ಸರಿಪಡಿಸಲು ಕೋ-ಆರ್ಡಿನೇಟಿಂಗ್ ಬಾಡಿಯಿರುವ ಹಾಗೆ ಅದಿರುವುದು. ಮಾನ್ಯ ಸದಸ್ಯರು ದಯವಿಟ್ಟು ಈ ಮಸೂದೆಗೆ ಬೆಂಬಲ ಕೊಡಬೇಕು.

ಶ್ರೀ ಕೆ. ಕೆಂಚಪ್ಪ.—ಮಾನ್ಯ ಅಧ್ಯಕ್ಷರೇ ಕೆಲವು ದಿನಗಳನಂತರ ಗ್ರಾಮಪಂಚಾಯಿತಿ ಮತ್ತು ಲೋಕಲ್ ಬೋರ್ಡುಗಳಿಗೆ ಸಂಬಂಧಪಟ್ಟ ಒಂದು ಮಸೂದೆಯನ್ನು ತಂದಿದ್ದಾರೆ. ಇಷ್ಟು ದಿವಸ ತಡ ಮಾಡುವುದಕ್ಕೆ ಕೊಟ್ಟಿರುವ ಕಾರಣಗಳಂತೂ ತುಂಬ ಅಸಮಂಜಸ, ಹಿಂದಿನ ವ್ಯವಸ್ಥೆಗೆ ಇದ್ದ ಕಾರಣಗಳನ್ನು ಈಗ ಪ್ರಸ್ತಾಪಿಸದೆ ಹೊಸ ವ್ಯವಸ್ಥೆ ಮಾಡಲು ಹೊರಟಿರುವುದರಿಂದ ನಾನು ಈ ವಿಚಾರದಲ್ಲಿ ತುಂಬ ವಿಷಾದವನ್ನು ವ್ಯಕ್ತಪಡಿಸಬೇಕಾಗಿದೆ.

1954ನೇ ಇಸವಿಯಿಂದ ಇದುವರೆಗೂ ಜಿಲ್ಲಾ ಬೋರ್ಡುಗಳ ಸಂಬಂಧದಲ್ಲಿ ಒಪ್ಪಿಸಿರತಕ್ಕ ವರದಿಯಲ್ಲಿನ ಶಿಫಾರಸುಗಳನ್ನು ಕಾರ್ಯರೂಪಕ್ಕೆ ತರದೆ ಇಟ್ಟುಕೊಂಡಿರುವುದರಲ್ಲಿ ಸರ್ಕಾರದ ಕಡೆಯಿಂದ ತುಂಬ ಲೋಪವಾಗಿದೆ ಎಂದರೆ ತಪ್ಪಾಗುವುದಿಲ್ಲ. ಈಗ ನಮ್ಮ ಮುಂದೆ ಇರತಕ್ಕ ಮಸೂದೆಯನ್ನು ಚೆನ್ನಾಗಿ ಆಲೋಚನೆಮಾಡುವುದಾದರೆ, ಅದರಲ್ಲಿ ಸೂಚಿಸಿರುವಂತೆ ತಾಲ್ಲೂಕು ಬೋರ್ಡುಗಳನ್ನು ನಮ್ಮ ದೇಶದಲ್ಲಿ ಮತ್ತೆ ತರುವುದಕ್ಕೆ ಕೆಲವಾರು ಕಾರಣಗಳನ್ನು ಮಾನ್ಯ ಮಂತ್ರಿಗಳು ಕೊಟ್ಟಿದ್ದಾರೆ. ಆ ಕಾರಣಗಳು ಎಷ್ಟರಮಟ್ಟಿಗೆ ಸಮಂಜಸವಾದುವು ಎಂಬುದು ನನಗೆ ಅರ್ಥವಾಗಲಿಲ್ಲ. ಸುಮಾರು 20 ವರ್ಷಗಳಿಂದಲೂ ಜಿಲ್ಲಾಬೋರ್ಡುಗಳಲ್ಲಿ ಕೆಲಸ ಮಾಡಿದ ಅನುಭವ ನನಗೆ ಉಂಟು. 1918ನೆಯ ಇಸವಿಗೆ ಹಿಂದಿನಿಂದ ಮೈಸೂರು ಸಂಸ್ಥಾನದಲ್ಲಿ ತಾಲ್ಲೂಕು ಬೋರ್ಡುಗಳಿದ್ದುವು. ಅವು 1928ನೆ ಇಸವಿಯವರೆಗೂ ಕೆಲಸ ಮಾಡಿದವು; 1930ರ ವರೆಗೂ ಕೆಲಸ ಮಾಡಿದವು ಎಂದರೂ ತಪ್ಪಾಗುವುದಿಲ್ಲ. 1928ನೆ ಇಸವಿಯಲ್ಲಿ ಒಂದು ಕಮಿಟಿ ನೇಮಕವಾಯಿತು ಮತ್ತು ಅವರು ತಮ್ಮ ಶಿಫಾರ್ಸುಗಳನ್ನು ಮಾಡಿದ್ದಾರೆ. ಹಿಂದೆ ತಾಲ್ಲೂಕು ಬೋರ್ಡುಗಳಲ್ಲಿದ್ದಂಥ ನ್ಯೂನತೆಗಳನ್ನೂ ಲೋಪಗಳನ್ನೂ ಆ ವರದಿಯಲ್ಲಿ ನಮೂದಿಸಿದ್ದಾರೆ. ಮತ್ತು ಆ ವರದಿಯಲ್ಲಿ ತಾಲ್ಲೂಕು ಬೋರ್ಡುಗಳನ್ನು ವಜಾಮಾಡಿ ಜಿಲ್ಲಾ ಬೋರ್ಡುಗಳನ್ನು ಏರ್ಪಡಿಸಬೇಕೆಂದು ಶಿಫಾರ್ಸು ಮಾಡಿದ್ದಾರೆ. ಆ ವರದಿಯಲ್ಲಿ ವಾಸ್ತವವಾದ ಕಾರಣಗಳನ್ನು ಕೊಟ್ಟಿದ್ದರೂ ಸಹಿತ ಅದನ್ನು ಒಂದನ್ನಾದರೂ ನಮೂದು ಮಾಡದೆ ಈಗ ಮೊಗಂ ಆಗಿ ಅದೇ ನಮೂನೆಯ ತಾಲ್ಲೂಕು ಬೋರ್ಡುಗಳನ್ನು ರಚಿಸಬೇಕೆಂದು ಹೇಳತಕ್ಕ ವಾದವನ್ನು ಹೇಗೆ ನಂಬಬೇಕೋ ಗೊತ್ತಾಗುವುದಿಲ್ಲ.

ಶ್ರೀ ಆರ್. ಚೆನ್ನಿಗರಾಮಯ್ಯ.—ಯಾವ ರಿಪೋರ್ಟ್ ?

ಶ್ರೀ ಕೆ. ಕೆಂಚಪ್ಪ.—ಹಿರಣ್ಣಯ್ಯನವರ ರಿಪೋರ್ಟ್. 1926ನೆ ಇಸವಿಯಲ್ಲಿ ಒಂದು ಸಮಿತಿ ನೇಮಕವಾಗಿತ್ತು. ಆ ಸಮಿತಿಯ ಶಿಫಾರ್ಸುಗಳ ಪ್ರಕಾರವಾಗಿ ಆಗಿರತಕ್ಕ ಕಾನೂನೇ 1930ನೆ ಇಸವಿಯಲ್ಲಿ ಜಾರಿಗೆ ಬಂದು ಇದುವರೆಗೂ ನಡೆದುಕೊಂಡು ಬಂದಿರತಕ್ಕದ್ದು. 1954ನೆಯ ಇಸವಿಯವರೆಗೆ ನಡೆದುಕೊಂಡು ಬಂದರತಕ್ಕ ಜಿಲ್ಲಾಬೋರ್ಡುಗಳ ಕಾನೂನಿಗೆ ಮುಖ್ಯ ಕಾರಣವಾಗಿರತಕ್ಕ ರಿಪೋರ್ಟ್ ಅದು. ನಮಗೆ ಸ್ವಾತಂತ್ರ್ಯ ಬಂದನಂತರ ಅನುಭವಸ್ಥರು ಬಂದಿದ್ದಾರೆ. ಅವರು ರಾಜ್ಯಾಡಳಿತದ ವಿಚಾರದಲ್ಲಿ ತಮ್ಮ ಭಾವನೆಗಳನ್ನು ತಲೆಗೆ ತುಂಬಿಕೊಂಡು ಬಂದಿರುತ್ತಾರೆ. ಅವರಿಗೆ ಹಿಂದೆ ನಡೆದದ್ದು ಯಾವುದೂ ಬೇಕಾಗಿಲ್ಲ, ಅವರು ಮುಂದೆ ಹೋಗಬೇಕಾಗಿದೆ. 1926ನೆಯ ಇಸವಿಯಲ್ಲಿ ನಿರ್ಮಾಣವಾಗಿದ್ದ ಸಮಿತಿಯವರು ಮಾಡಿರುವ ಶಿಫಾರಸುಗಳು ಮತ್ತು ಅದಕ್ಕೆ ಕಾರಣಗಳನ್ನು ವರದಿಯಲ್ಲಿ ಅಳವಡಿಸಿದ್ದರೂ ಸಹಿತ ಅದರ ವಿಚಾರದಲ್ಲಿ ಒಂದು ಅಕ್ಷರವನ್ನೂ ಸಹ ಇದರಲ್ಲಿ ಹೇಳದೆ ಇವೊತ್ತಿನ ದಿವಸ ಯಥಾಪ್ರಕಾರ ತಾಲ್ಲೂಕು ಬೋರ್ಡುಗಳನ್ನು ಮತ್ತೆ ನಿರ್ಮಾಣಮಾಡುವುದಕ್ಕೆ ಹೊರಟಿರುವುದರ ಉದ್ದೇಶವಾದರೂ ಏನು ? ಇದರಲ್ಲಿ ಮತ್ತೆ ನಾಮಕರಣ ವ್ಯವಸ್ಥೆಯನ್ನು ಆಡಳಿತದಲ್ಲಿ ತರಬೇಕೆಂಬ ಮನೋಭಾವನೆ ನಿಮಗೆ ಇದೆ. 1947ನೆಯ ಇಸವಿಗೆ ಹಿಂದೆ ಜಿಲ್ಲಾಬೋರ್ಡುಗಳಿಗೆ ಕೆಲವಾರು ನಾಮಕರಣಗಳಿದ್ದುವು. ಅದನ್ನು ಇದೇ ಗಾಂಧಿ ಭಕ್ತರು, ಆ ಕಡೆ ಕುಳಿತಿರುವವರು ಜಾರಿಗೆ ತಂದರು ಮತ್ತೆ ಆ ಪದ್ಧತಿಯನ್ನೇ ಈಗ ಪೂರಾ ಜಾರಿಗೆ ತರಲಿಕ್ಕೆ ತಯಾರಾಗಿದ್ದಾರೆ.

Sri J. B MALLARADHYA.—Sir, I want to place the correct position in regard to this matter, because I do not want the House to be misled in regard

to facts. In fact, the Local Self-Government Conference convened by the Government on 23rd April while reviewing the position of the local bodies recommended the retention of the Taluk Boards in the State, but the Government took a contrary view and without assigning any reasons, on the 24th December they stated that in view of the limited scope for work and the diminishing funds of the local bodies, it would be advantageous to abolish the Taluk Boards without in any way prejudicing the development of local boards.

ಶ್ರೀ ಕೆ. ಕೆಂಚಪ್ಪ.—ಆ ರೀತಿ ರೆಕಮೆಂಡೇಷನ್ ಆಗಿರತಕ್ಕದ್ದು, ಜಾರಿಗೆ ಬಂದಿರತಕ್ಕದ್ದು 1930ನೆ ಇಸವಿಯಿಂದ. 1930ನೆ ಇಸವಿಯಲ್ಲಿ ತಾಲ್ಲೂಕು ಬೋರ್ಡ್‌ಗಳು ಹೋಗಿ ಜಿಲ್ಲಾ ಬೋರ್ಡ್‌ಗಳ ರಚನೆಯಾಯಿತು. It was an elected body with a limited scope for nomination. 1930ನೆ ಇಸವಿಯಲ್ಲಿ ನಾಲ್ಕೈದು ಸ್ಥಾನಗಳಿಗೆ ಮಾತ್ರ ನಾಮಕರಣ ಮಾಡವುದಕ್ಕೆ ಅವಕಾಶವಿತ್ತು. ಅದನ್ನು ಕಾಂಗ್ರೆಸ್ ಭಕ್ತರು ವಿಪರೀತವಾಗಿ ವಿರೋಧ ಮಾಡುತ್ತಿದ್ದರು. ನಾಮಕರಣ ಪದ್ಧತಿಬೇಡ, ಪ್ರಜಾಪ್ರಭುತ್ವದ ತಳಹದಿಯ ಮೇಲೆ ಎಲ್ಲವನ್ನೂ ಮಾಡಬೇಕೆಂದು ಹೇಳತಕ್ಕವರು, ನಾಮಕರಣಕ್ಕೆ ವಿರೋಧವಾಗಿ ಇದವರು, ದೇಶವೆಲ್ಲಾ ನಾಮಕರಣ ಪದ್ಧತಿಗೆ ವಿರೋಧವಾಗಿದೆ ಎಂದು ಹೇಳತ್ತಿದ್ದವರು, ಇವೊತ್ತಿನ ದಿವಸ ಜಿಲ್ಲಾ ಬೋರ್ಡುಗಳಿಗೆ ಬರೀ ನಾಮಕರಣ ಸದಸ್ಯರನ್ನು ಸೇರಿಸುವುದಕ್ಕೆ ಅದು ಯಾವ ರೀತಿಯಲ್ಲಿ ಒಪ್ಪುತ್ತಾರೆಂದು ಕೇಳುತ್ತೇನೆ.

ಶ್ರೀ ಆರ್. ಚೆನ್ನಿಗರಾಮಯ್ಯ.—ಬರೀ ನಾಮಕರಣ ಸದಸ್ಯರು ಎಂದು ಎಲ್ಲಿ ಹೇಳಿದೆ?

ಶ್ರೀ ಕೆ. ಕೆಂಚಪ್ಪ.—ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್‌ಎನ್ನುವುದನ್ನುಯಾವ ರೀತಿ ರಚನೆಮಾಡುತ್ತೀರಿ

ಶ್ರೀ ಆರ್. ಚೆನ್ನಿಗರಾಮಯ್ಯ.—ಅವರು ಜಿಲ್ಲಾ ಬೋರ್ಡ್ ಅಧ್ಯಕ್ಷರಾಗಿದ್ದರು. ಈಗ ಡೆವಲಪ್‌ಮೆಂಟ್ ಕೌನ್ಸಿಲ್‌ಗಳ ರಚನೆಯಾಗಬೇಕಾದರೆ ಕಾನೂನು ಹೇಗಿರಬೇಕು ಎಂದು ಹೇಳಿದ್ದೇನೆ.

ಶ್ರೀ ಕೆ. ಕೆಂಚಪ್ಪ.—ಅದಕ್ಕೆ ಬರುತ್ತೇನೆ. ಇನ್‌ಫರ್‌ಮೇಷನ್ ಬೇಕಾದರೆ ತೆಗೆದುಕೊಳ್ಳಿ. ಆದರೆ ಈ ರೀತಿ ನಡುವೆ ಬಾಯಿಹಾಕುವುದು ಬೇಡ. ಏಕೆಂದರೆ ಏನಾದರೂ ಒಂದು ಇನ್‌ಫರ್‌ಮೇಷನ್ ಬೇಕಾಗಿದ್ದರೆ ಕೇಳಬೇಕೇ ಹೊರತು—ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟ್ ಆಗಿದ್ದೆ, ನನಗೆ ಗೊತ್ತಿಲ್ಲವೆನ್ನುವ ಭಾವನೆ ಬೇಡ. ಆ ವಿಚಾರದಲ್ಲಿ ನಾವು ಬೇಕಾದಷ್ಟು ಹೇಳಬಹುದಾಗಿದೆ.

ಇವೊತ್ತಿನ ದಿವಸ ಜಿಲ್ಲಾ ಕೌನ್ಸಿಲ್‌ಗೆ ನಾಮಕರಣ ಮಾಡುವುದಕ್ಕೆ ಯಾವರೀತಿ ಒಪ್ಪಿದ್ದೀರಿ. ನಾಮಕರಣ ಪದ್ಧತಿಯ ವಿಚಾರದಲ್ಲಿ ನಿಮ್ಮ ತತ್ವವೇನು ಎಂದು ಕೇಳುತ್ತಿದ್ದೇನೆ! ಅಧಿಕಾರವಿಲ್ಲದ ಒಂದು ಸಂಸ್ಥೆಯನ್ನು ಅಥವ ಕೆಲಸವಿಲ್ಲದ ಸಂಸ್ಥೆಯನ್ನು ಏಕ ನಿರ್ಮಾಣ ಮಾಡುವುದಕ್ಕೆ ಹೋಗುತ್ತೀರಿ? ಯಾವ ಉದ್ದೇಶಕ್ಕೋಸ್ಕರ ಮಾಡುತ್ತೀರಿ? ಅದನ್ನು ಮಾಡಲು ಈ ಕಡತದಲ್ಲಿ ಏಕೆ ಸೇರಿಸಿದ್ದೀರಿ? ನಾನು ಒಂದು ಉಸಿರಿನಿಂದ, ಗ್ರಾಮಪಂಚಾಯಿತಿಗಳಿಗೂ ಮತ್ತು ತಾಲ್ಲೂಕು ಬೋರ್ಡುಗಳಿಗೂ ವ್ಯಾಜ್ಯವೇನಾದರೂ ಹುಟ್ಟಿದರೆ ಅದನ್ನು ಸರಿಪಡಿಸುವುದಕ್ಕಾಗಿ ಈ ಜಿಲ್ಲಾ ಕೌನ್ಸಿಲ್‌ಗಳನ್ನು ನಾಮಕರಣ ಮಾಡುತ್ತೀರಿ ಎಂದು ಹೇಳುತ್ತೇನೆ. ಅದು ಒಂದು Appellate authority. ಏನಾದರೂ ಅಪೀಲ್ ಮಾಡಿದರೆ ಕೇಳತಕ್ಕ ಅಧಿಕಾರವ್ಯಾಪ್ತಿಯನ್ನು ಹೊಂದಿರತಕ್ಕ ಸಂಸ್ಥೆ. ಇದಕ್ಕೆ ನಾಮಕರಣಮಾಡಿ ಸದಸ್ಯರನ್ನು ನೇಮಿಸುವ ಅಧಿಕಾರವನ್ನು ಇಟ್ಟುಕೊಂಡಿರುವುದು ನಿಮ್ಮ ತತ್ವವಾಗಿದೆ ಎಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ.

ಇನ್ನೂ ಮುಂದೆ ಹೋದರೆ, ತಾಲ್ಲೂಕು ಬೋರ್ಡುಗಳನ್ನು ತಾವು ಮಾಡಿದ್ದೀ ಆದರೆ ಅವು ಕೆಲವೇ ದಿವಸಗಳಲ್ಲಿ ವಜಾ ಆಗಿ, ಪುನಃ ಜಿಲ್ಲಾ ಬೋರ್ಡುಗಳಿಗೇ ಬರುತ್ತೀರಿ ಎಂದು ಹೇಳುತ್ತೇನೆ. ತಾವು ಹೇಳುವ ರೀತಿಯಲ್ಲಿ ಈ ತಾಲ್ಲೂಕು ಬೋರ್ಡುಗಳಿಗೆ ರಸ್ತೆಗಳನ್ನು ನಿರ್ಮಾಣಮಾಡುವುದು ಮತ್ತು ಅವುಗಳ ದುರಸ್ತಿಕೆಲಸ, ಆಸ್ಪತ್ರೆಗಳ ನಿರ್ಮಾಣದ ಕೆಲಸ, ಸ್ಕೂಲುಗಳನ್ನು ತೆರೆಯುವುದು, ಜನಗಳ ಆರೋಗ್ಯವನ್ನು ಕಾಪಾಡುವುದು ಇಂಥ ಏನೇನೋ ಕೆಲಸಗಳನ್ನು ವಹಿಸುತ್ತೀರಿ. ಒಬ್ಬ ಹೆಲ್ತ್ ಇನ್‌ಸ್ಪೆಕ್ಟರನ್ನು ನೇಮಕಮಾಡಬೇಕಾದರೆ 125 ರೂಪಾಯಿಗಳನ್ನಾದರೂ ಕೊನೆಯ ಪಕ್ಷ ಕೊಡಬೇಕು. ಸ್ಕೂಲು ಇನ್‌ಸ್ಪೆಕ್ಟರಿಗೆ ಸಹ 125—160 ರೂಪಾಯಿಗಳನ್ನಾದರೂ, ದರಿದ್ರವಾಗಿ ಲೆಕ್ಕ ಹಾಕಿದರೂ, ಕೊಡಬೇಕು. ರಸ್ತೆಗಳನ್ನು ನಿರ್ಮಾಣ ಮಾಡುವುದಕ್ಕೆ ಒಬ್ಬ ಇಂಜಿನಿಯರನ್ನು ನೇಮಕಮಾಡದೆ ಇದ್ದರೂ ಒಬ್ಬ ಓವರ್‌ಸೀಯರನ್ನಾದರೂ ನೇಮಕ ಮಾಡಬೇಕು. ಅವರಿಗೆ 150 ರೂಪಾಯಿಗಳನ್ನಾದರೂ ಕೊಡಬೇಕು. ಇದರ ಜೊತೆಗೆ ತಾಲ್ಲೂಕು ಬೋರ್ಡಿನಲ್ಲಿ ಒಬ್ಬ ಚೀಫ್ ಎಕ್ಸಿಕ್ಯೂಟಿವ್ ಆಫೀಸರು ಇರಬೇಕು. ಅವರು ಯಾವ ಗ್ರೇಡಿನವರು ಇರಬೇಕು ಎಂಬುದು ದೇವರಿಗೇ ಗೊತ್ತು. ನನಗಂತೂ ಗೊತ್ತಿಲ್ಲ. ಮಾನ್ಯ ಮಂತ್ರಿಗಳಿಗೆ ಗೊತ್ತಿರಬಹುದು. ಯಾವ ಗ್ರೇಡಿನವರು ಇರಬೇಕು ಎನ್ನುವುದನ್ನು ಕಾನೂನಿನಲ್ಲಿ ನಮೂದು ಮಾಡಿಲ್ಲ. ತಾಲ್ಲೂಕು ಬೋರ್ಡ್‌ಗಳಿಗೆ, ಇವೊತ್ತಿನ ಭೂಕಂದಾಯದಿಂದ ಕೊಡುತ್ತೇವೆಂದು ನಿಗದಿಮಾಡಿರುವ ಹಣವಾದರೂ ಶೇಕಡ ಹದಿನೈದರಷ್ಟು. ಶೇಕಡ 6¼ರಂತೆ ಕೊಡುತ್ತೇವೆಂದು ಹೇಳಿದ್ದುದನ್ನೇ ಕೊಡದೇಇರುವ ಸರ್ಕಾರ ಹದಿನೈದರಂತೆ ಕೊಡುತ್ತೇವೆಂದು ಈಗ ಹೇಳಿದರೆ ಹೇಗೆ ನಂಬುವುದು? ಇದರ ಜೊತೆಗೆ ಇಡೀ ಸಂಸ್ಥಾನದ ರೆವೆನ್ಯೂ ಉತ್ಪತ್ತಿಯಲ್ಲಿ ಶೇಕಡ ಹತ್ತರಷ್ಟನ್ನು ತೆಗೆದುಕೊಂಡು ತಮ್ಮ ಮರ್ಜಿಗೆ ಬಂದವರಿಗೆ ಕೊಡತಕ್ಕದ್ದು ಎಂದು ಈ ಕಾನೂನಿನಲ್ಲಿದೆ. ಇದೇ ರೀತಿಯಲ್ಲಿ ಗ್ರಾಮ ಪಂಚಾಯಿತಿಗಳಿಗೂ ಸಹ ಅವುಗಳ ಉತ್ಪತ್ತಿಯ ಜೊತೆಗೆ ಸರ್ಕಾರದವರು ರೆವೆನ್ಯೂ ಉತ್ಪತ್ತಿಯಲ್ಲಿ ಇಷ್ಟು ಭಾಗವನ್ನು ಕೊಡಬೇಕೆಂದು ಸೂಚಿಸಿದ್ದಾರೆ.

Mr. SPEAKER.—The House will now rise for lunch and will meet after half an hour.

The House adjourned for Lunch at Three of the Clock and re-assembled at Thirty Minutes past Three of the Clock.

[MR. SPEAKER in the Chair.]

Mr. SPEAKER.—So far as the consideration of the Bill is concerned, the debate will continue for three days, including today, that is today, tomorrow and the day after tomorrow and as the Hon'ble Minister has told the House, it will be referred to a Select Committee afterwards.

[SRI J. H. SHAMSUDDIN in the Chair]

ಶ್ರೀ ಕೆ. ಕೆಂಚಪ್ಪ.—ಆರೋಗ್ಯದ ವಿಚಾರವಾಗಿ ವ್ಯವಸ್ಥೆಯನ್ನು ಮಾಡುವಾಗ, ಎಷ್ಟರಮಟ್ಟಿಗೆ ಸಿಬ್ಬಂದಿಯನ್ನು ಇಡಬೇಕಾಗಿದೆ ಮತ್ತು ರಸ್ತೆ ವಗೈರೆಗಳನ್ನು ಮಾಡುವಾಗ ಎಷ್ಟರಮಟ್ಟಿಗೆ ಸಿಬ್ಬಂದಿ ಇರಬೇಕು ಎನ್ನತಕ್ಕಂಥ ವಿಷಯವನ್ನು ತಮ್ಮ ಫಿನಾನ್ಷಿಯಲ್ ಇಂಪ್ಲಿಕೇಷನ್ಸ್‌ನಲ್ಲಾಗಲಿ ಅಥವಾ ಫಿನಾನ್ಷಿಯಲ್ ಮೆಮೋರ್‍ಯಾಂಡಮ್‌ನಲ್ಲಾಗಲಿ ಏನೂ ಹೇಳಲಿಲ್ಲ. ಅದೂ ಅಲ್ಲದೇ ಎಜುಕೇಷನ್, ಅಗ್ರಿಕಲ್ಚರ್, ಅನಿಮಲ್ ಹಸ್ಬೆಂಡ್ರಿ, ಪಬ್ಲಿಕ್ ವರ್ಕ್ಸ್, ಈ ವಿಚಾರಗಳನ್ನೆಲ್ಲಾ ತೆಗೆದುಕೊಳ್ಳಬೇಕಾಗಿದೆ.

Sri R. CHENNIGARAMAIAH.—Page 131, 3rd line 'land revenue collection of the village'' must be corrected as ''land revenue of the taluk.''

ಶ್ರೀ ಕೆ. ಕೆಂಚಪ್ಪ.—ನಮ್ಮ ಸಂಸ್ಥಾನದಲ್ಲಿ ಹಳ್ಳಿಯಿಂದ ಹಳ್ಳಿಗೆ ರಸ್ತೆಗಳಿಲ್ಲ. ಹಳ್ಳಿಯಿಂದ ಹಳ್ಳಿಗೆ ರಸ್ತೆಮಾಡುವ ಜವಾಬ್ದಾರಿ ತುಂಬ ದೊಡ್ಡದಾಗಿದೆ. ಇಂಥ ದೊಡ್ಡ ಜವಾಬ್ದಾರಿಯನ್ನು ತಾಲ್ಲೂಕು ಬೋರ್ಡಿಗೆ ಏಕೆ ವಹಿಸುತ್ತಿಲ್ಲವೆಂಬುದರ ಒಂದು ಹಿನ್ನಲೆಯನ್ನೂ ಅರಿತುಕೊಳ್ಳಬೇಕು. ಏಕೆಂದರೆ ಇದುವರೆಗೂ ಡೆವಲಪ್‌ಮೆಂಟ್ ಬೋರ್ಡಿನವರು ಅಭಿವೃದ್ಧಿ ಕಾರ್ಯಗಳನ್ನು, ಕೆಲವಾರು ರಸ್ತೆಗಳನ್ನು, ಯಾವ ರೀತಿಯಲ್ಲಿ ಮಾಡಿದ್ದಾರೆ ಎನ್ನತಕ್ಕಂಥಾದ್ದು ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿದೆ. ಒಂದಾದರೂ ಸರಿಯಾಗಿಲ್ಲ. ದುಡ್ಡು ಖರ್ಚಾಗುತ್ತಿದೆ, ರಸ್ತೆಗಳು ಅಭಿವೃದ್ಧಿಗೆ ಬರುವ ಹಾಗಿಲ್ಲ ಎನ್ನುವಾಗ, ಕೊನೆಗೆ ಎಲ್ಲಾ ರಸ್ತೆಗಳನ್ನೂ ಜಿಲ್ಲಾ ಬೋರ್ಡುಗಳೇ ಮಾಡಬೇಕೆಂದು ಆರ್ಡರು ಹೊರಡಿಸಿದರು. ಆಗ ಜಿಲ್ಲಾ ಬೋರ್ಡು ಅಧ್ಯಕ್ಷರುಗಳು ಪ್ರಶ್ನಿಸಿದಾಗ, ಇದು ಹಾಗೆಯೇ ಮಾಡಬೇಕಾದದ್ದು, ಸಾಧ್ಯವಾದಷ್ಟುಮಾಡಿ, ಗವರ್ನ್‌ಮೆಂಟ್ ಆರ್ಡರ್ ಇದೆ ಎಂದು ಹೇಳಿದರು.

ನಿಮ್ಮ ಜವಾಬ್ದಾರಿಗೆ ಬಂದ ಮೇಲೆ ಎಷ್ಟು ಮಾಡಬೇಕೋ ಮಾಡಿರಿ. ನಾನು ಇಂದು ಕೇಳುತ್ತೇನೆ, ಇದು ಅಭಿವೃದ್ಧಿಕಾರ್ಯಗಳ ಒಂದು ನೀತಿಯೇ? ಏನು? ಮುಂದಾದರೂ ಈ ಜವಾಬ್ದಾರಿಯನ್ನು ನಾವು ಹೊತ್ತರೆ ಕಷ್ಟವಾಗುತ್ತದೆ ಎಂಬ ಮನೋಭಾವದಿಂದ ಹಳ್ಳಿಯಿಂದ ಹಳ್ಳಿಗೆ ರೋಡುಮಾಡತಕ್ಕ ಜವಾಬಾರಿಯನ್ನು ಬೇರೆಯದಕ್ಕೆ ಈಗ ವಹಿಸಿದ್ದೀರಿ. ಇದಕ್ಕೆ ಯಾವ ಪ್ರಮಾಣದಲ್ಲಿ ದುಡ್ಡುಬೇಕಾದೀತು ಮತ್ತು ಎಷ್ಟು ದುಡ್ಡು ಬೇಕಾದೀತು ಮತ್ತು ಮಾಡಿದ್ದ ರಸ್ತೆಯನ್ನು maintain ಮಾಡುವುದಕ್ಕೆ ಎಷ್ಟು ದುಡ್ಡು ಬೇಕಾಗುತ್ತದೆ ಎಂಬದನ್ನು ನೋಡಿ ಅದಕ್ಕಾದರೂ ತಾವು ಒಂದು ವ್ಯವಸ್ಥೆಮಾಡಿ. ಈಗೇನು ಆಯಾ ಗ್ರಾಮದ ಭೂಕಂದಾಯದ ಶೇಕಡ 15 ಭಾಗದಷ್ಟು ಮತ್ತು ಸ್ಟೇಟಿನ ಶೇಕಡ 10 ಕಂದಾಯದ ಹಣದಿಂದ ಇದನ್ನೆಲ್ಲಾ ಮಾಡುವುದಕ್ಕೆ ಸಾಧ್ಯವಾದೀತೆ? ಹೀಗೆ ಸರ್ಕಾರದವರು ತಮ್ಮ ಇಚ್ಛಾನುಸಾರ ಶೇಕಡ 10ರಷ್ಟು ಕೊಡುತ್ತೇವೆಂಬುದರಲ್ಲಿ ನಮಗೆ ವಿಶ್ವಾಸವಿಲ್ಲ. ಏಕೆಂದರೆ ಇದುವರೆಗೆ ನೀವು ಮಾಡಿರುವುದನ್ನು ನೋಡಿದರೆ, ನೀವು ಆರೀತಿ ಎಂದೂ ಕೊಟ್ಟೂ ಇಲ್ಲ. ಜೊತೆಗೆ ಇಲ್ಲಿ ಉಪಯೋಗಿಸಿರುವ ಪದ 'may' ಎಂಬುದು, 'shall' ಎಂಬುದಲ್ಲ. ಕೊಟ್ಟರೆ ಕೊಡಬಹುದು ಇಲ್ಲದಿದ್ದರೆ ಬಿಡಬಹುದು. ಅದರಲ್ಲೂ obligatory ಮತ್ತು optional ಎಂದು ಒಂದು ದೊಡ್ಡ ಪಟ್ಟಿಮಾಡಿ ಕೊಟ್ಟರೆ ಅವರು ಯಾವರೀತಿ ಮಾಡಿಯಾರು ಎಂಬ ಬಗ್ಗೆ ಒಂದು ಶಬ್ದವನ್ನೂ ಹೇಳಲಿಲ್ಲ. ಈ ಆಕ್ಟಿನಲ್ಲಿ ಇನ್ನೊಂದು ವಿಷಯವನ್ನು ಹೇಳಿದ್ದಾರೆ. 397ನೆಯ ಪುಟದಲ್ಲಿ Grant by Government ಎಂಬ ಶಿರೋನಾಮೆಯ ಕೆಳಗೆ ಹೇಳಿದ್ದೀರಿ:

> "The Government shall make annually a grant to every panchayat of an amount equal to fifteen per cent of the Land Revenue collection of the village"

ಈ ಪದಗಳ ಅರ್ಥವೇನು? ಯಾವ ಉದ್ದೇಶಕ್ಕಾಗಿ 'grant' ಎಂಬ ಪದವನ್ನು ಹಾಕಿದ್ದೀರಿ?

ಶ್ರೀ ಆರ್. ಚೆನ್ನಿಗರಾಮಯ್ಯ.—'shall' ಎಂಬ ಪದವೂ ಇದೆ.

ಶ್ರೀ ಕೆ. ಕೆಂಚಪ್ಪ.—'ಗ್ರಾಂಟ್' ಎಂತಲೂ ಹೇಳಿದ್ದಾರೆ. There is a vast difference between the words 'assignment' and 'grant' 'shall' ಎಂದು ಹೇಳಿದ್ದರೂ ಅದನ್ನು ವಜಾಮಾಡತಕ್ಕ ಸಂದರ್ಭಗಳೂ ಇವೆ. ಹಿಂದೆಯೂ ಹೀಗೆ 'shall' ಇದ್ದದ್ದನ್ನು ತೆಗೆದುಹಾಕಿ ಆಮೇಲೆ 'may' ಮಾಡಿ ಕೊನೆಗೆ ಇಚ್ಛಾನುಸಾರ ಮಾಡಿಕೊಂಡು ಏನೂ ಕೊಡದೆ ಹೋದುದೂ ಇದೆ.

Mr. CHAIRMAN (SRI J. H. SHAMSUDDIN).—The Hon'ble Member may read the second clause.

ಶ್ರೀ ಕೆ. ಕೆಂಚಪ್ಪ.—"The Government shall assign to the Panchayats in the State" ಎಂದಿದೆ. ಇದನ್ನೂ ನಾನು ಓದಿದ್ದೇನೆ. 'assign' ಎಂದು ಹೇಳಿ ಇಡೀ ಸಂಸ್ಥಾನದಲ್ಲಿ ಉತ್ಪತ್ತಿಯಾದ ದುಡ್ಡನ್ನು ಎಲ್ಲರಿಗೂ ಕೊಡುವುದು ಎಂಬುದಕ್ಕೂ, 'grant' ಎಂದು ಕೊಡುವುದಕ್ಕೂ ವ್ಯತ್ಯಾಸವಿದೆ. ಏತಕ್ಕೆಂದರೆ "the amount to be allotted to any panchayat being such as the Government may from time to time determine" ಎಂದು ಹೇಳಿದ್ದಾರೆ. That fund is created and there it ends.

ಶ್ರೀ ಆರ್. ಚೆನ್ನಿಗರಾಮಯ್ಯ.—ಇಲ್ಲ, ಇಲ್ಲ. ಅಲ್ಲಿ 'may' ಎಂದಿಲ್ಲ. ಅದಕ್ಕೂ 'shall' ಎಂತಲೇ ಇದೆ.

ಶ್ರೀ ಕೆ. ಕೆಂಚಪ್ಪ.—ಇಲ್ಲಿಯೇ ಗಂಟುಮಾಡುವ ಯೋಚನೆ ಇರುವುದು. It may not be there. The word 'shall' ends by creating a fund. Afterwards for a matter of grant, it depends on the discretion of the Government to grant or not. That is what the word 'may' signifies. The

word signifies that it has discretionary power given to Government to grant or not. ಈ ದೃಷ್ಟಿಯಿಂದ ನಾವು ಆಲೋಚನೆ ಮಾಡಬೇಕಾಗಿದೆ. ಆದ್ದರಿಂದ ನನಗೆ ಎರಡನೆಯ ಕ್ಲಾಜಿನಲ್ಲಿ ಎಳ್ಳಷ್ಟೂ ವಿಶ್ವಾಸ ಉಳಿದಿಲ್ಲ. ಹಿಂದಿನ ಅನುಭವದಿಂದ, 'grant' ಎಂಬ ಪದಕ್ಕೆ ಸರಿಯಾದ ಅರ್ಥವನ್ನು ಕೊಡಬೇಕು. 83ನೆಯ ಪುಟದಲ್ಲಿ ಮಾಡಿರುವುದನ್ನು ಸ್ವಲ್ಪ ನೋಡಬೇಕು. "The Government shall assign to the Taluk Boards in the State an amount equal to ten per cent of the land revenue collection of the State, the amount to be allotted to any Taluk Board being such as the Government *may* from time to time determine to be expended on such purposes as the Government may from time to time direct" ಎಂದು ಹೇಳಿದ್ದಾರೆ.

"may grant" ಎಂದು ಹೇಳಿದ್ದಾರೆ. ಹೀಗೆ ವ್ಯತ್ಯಾಸ ಮಾಡಿರುವುದಕ್ಕೆ ಏನಾದರೂ ಆಧಾರವುಂಟೇ? The framers of Law and framers of Legislative Provisions must be very careful in incorporating any word, because we have got to take the real meaning of the word incorporatied. ಆದ್ದರಿಂದ ಈ ಪದಗಳ ವ್ಯಾಪ್ತಿಯನ್ನು ಸ್ವಲ್ಪ ಎಲ್ಲರೂ ಅರ್ಥಮಾಡಿಕೊಳ್ಳಬೇಕಾಗುತ್ತದೆ.

ಶ್ರೀ ಜಿ. ಶಿವಪ್ಪ (ಚಿತ್ರದುರ್ಗ).—ತಾವು ಏನು advocate ಮಾಡುತ್ತಿದ್ದೀರೆಂಬುದು ಅರ್ಥವಾಗಲಿಲ್ಲ.

ಶ್ರೀ ಕೆ. ಕೆಂಚಪ್ಪ.—ಯಾವ ಉದ್ದೇಶದಿಂದ 'grant' ಎಂದು ಹೇಳಿದ್ದಾರೆ, ಇಲ್ಲಿ? ಏಕೆ 'assign' ಎಂದು ಹೇಳಿದ್ದಾರೆ? With no purpose they have used different words.

ಶ್ರೀ ಆರ್. ಚೆನ್ನಿಗರಾಮಯ್ಯ.—ಇದು Loan ಅಲ್ಲ, ಪಂಚಾಯಿತಿಗಳಿಗೆ outright grant ಕೊಡುವಂಥದ್ದು.

ಶ್ರೀ ಕೆ. ಕೆಂಚಪ್ಪ.—ಹಾಗಾದರೆ, 'may' ಎಂಬುದರ ಅರ್ಥವೇನು? ಏಕೆ ಹೀಗೆ ವ್ಯತ್ಯಾಸ ಮಾಡಿದ್ದೀರಿ? ಇಲ್ಲಿ 'assign' ಎಂದು ಹೇಳಿ ಅಲ್ಲಿ ಏಕೆ 'grant' ಎಂದು ಹಾಕಿದ್ದೀರಿ? The proper word is "assign" and not "grant". ಉದಾಹರಣೆಗೆ, ಒಂದು ರಸ್ತೆಯನ್ನು ಮಾಡಿದರೆ ಅದು ತಾಲ್ಲೂಕ್ ಬೋರ್ಡಿನವರ ವ್ಯಾಪ್ತಿಯಲ್ಲಿರುತ್ತದೆ. ಆದ್ದರಿಂದ ಒಂದು ತಾಲ್ಲೂಕಿನಿಂದ ಇನ್ನೊಂದು ತಾಲ್ಲೂಕಿಗೆ ಹೇಗೆ link up ಮಾಡುತ್ತೀರಿ? ಅಲ್ಲಿ ಬರತಕ್ಕ ರಸ್ತೆಗೂ ಇಲ್ಲಿ ಬರತಕ್ಕ ರಸ್ತೆಗೂ ಸಂಬಂಧ ಎಲ್ಲಿದೆ?

ಶ್ರೀ ಆರ್. ಚೆನ್ನಿಗರಾಮಯ್ಯ.—ಸಂಬಂಧ ಕಲ್ಪಿಸುವುದಕ್ಕೇ District Development Council ಇರುವುದು.

ಶ್ರೀ ಕೆ. ಕೆಂಚಪ್ಪ.—ಅದಕ್ಕೆ ಯಾವ ಫಂಡೂ ಇರುವುದಿಲ್ಲ. ಕೆಲಸವೂ ಇರುವುದಿಲ್ಲ. ನಾಮಕಾವಾಸ್ತೆ ಒಂದು ಕಮಿಟಿ ಅದು. ಅದು ಕುಳಿತರೆ ಮೆಂಬರುಗಳಿಗೆ Travelling Allowance ಏನಾದರೂ ಸಿಕ್ಕುತ್ತದೆಯೋ ಇಲ್ಲವೋ ಗೊತ್ತಿಲ್ಲ. ಅದಕ್ಕೂ ದುಡ್ಡಿಲ್ಲವೆಂದರೆ ಅದಕ್ಕೆ ಮೆಂಬರುಗಳೂ ಬರುವುದಿಲ್ಲವೋ ಏನೋ. ಈ ರೀತಿಯಾಗಿ ಒಂದು ತಾಲ್ಲೂಕ್ ಬೋರ್ಡಿನವರು ಒಂದು ರಸ್ತೆಯನ್ನು ಮಾಡುವಾಗ ಇನ್ನೊಂದು ತಾಲ್ಲೂಕಿನವರು ಅದರ ಬಗ್ಗೆ ಏನು ಕಾರ್ಯಕ್ರಮತೆಗೆದುಕೊಳ್ಳಬೇಕೆಂದು ಎಲ್ಲಾದರೂ ಹೇಳಿದೆಯೇ? ಜಿಲ್ಲಾ ಬೋರ್ಡ್ ನೋಡಿಕೊಳ್ಳುತ್ತದೆಂದರೆ, ಜಿಲ್ಲಾ ಬೋರ್ಡಿನ ಶಕ್ತಿಯನ್ನೇ ನೋಡಿದರೂ, ಉದಾಹರಣೆಗೆ, ತುಮಕೂರು ಜಿಲ್ಲೆಯ ನಿದರ್ಶನವನ್ನೇ ತೆಗೆದುಕೊಂಡರೆ, ಅಲ್ಲಿ ಈಗ ಒಂದೊಂದು ರಸ್ತೆಯೂ ಅರ್ಧಂಬರ್ಧಕ್ಕೇ ನಿಂತುಕೊಂಡಿದೆ. ಈ ಕಡೆಯಿಂದ ಬಂದ ರಸ್ತೆ ಒಂದು ಕಡೆ ನಿಂತಿದೆ. ಆ ಕಡೆಯಿಂದ ಬಂದ ರಸ್ತೆ ಇನ್ನೊಂದು ಕಡೆ ನಿಂತುಕೊಂಡಿದೆ. ಇಂಥ ದುರವಸ್ಥೆಯನ್ನು ಸರಿಪಡಿಸುವುದಕ್ಕೆ ಎಲ್ಲಾ ಜಿಲ್ಲಾ ಬೋರ್ಡ್ ಅಧ್ಯಕ್ಷರುಗಳ ಮೀಟಿಂಗ್ ಮಾಡಿದ್ದೇವೆ. ಆ ವ್ಯವಸ್ಥೆಗೆ ಇಲ್ಲೊಂದು ಏರ್ಪಾಡಿಲ್ಲದಿದ್ದರೆ ಒಂದು ಲೋಪಮಾಡಿದಂತಾಗುತ್ತದೆ.

ಶ್ರೀ ಆರ್. ಚೆನ್ನಿಗರಾಮಯ್ಯ.—ಜಿಲ್ಲಾ ಬೋರ್ಡ್ ಅಧ್ಯಕ್ಷರುಗಳು ಸೇರುವುದಕ್ಕೆ ವ್ಯವಸ್ಥೆ ಮಾಡಿದೆ. ಡಿಸ್ಟ್ರಿಕ್ಟ್ ಬೋರ್ಡ್ ಆಕ್ಟಿನಲ್ಲಿ ಮೀಟಿಂಗ್ ಮಾಡಬೇಕೆಂದಿದೆ. ಇಲ್ಲಿಯೂ ಮಾಡಬಹುದು.

ಶ್ರೀ ಕೆ. ಕೆಂಚಪ್ಪ.—'ಬಹುದು' ಎಂಬ ಪದಕ್ಕೂ 'ಮಾಡಬೇಕು' ಎಂಬ ಪದಕ್ಕೂ ಬಹಳ ಅಂತರವಿದೆ.

ಡಾ॥ ಆರ್. ನಾಗನಗೌಡ.—ಜಿಲ್ಲಾ ಬೋರ್ಡ್ ಪ್ರೆಸಿಡೆಂಟರುಗಳು ಮದ್ರಾಸಿನಲ್ಲಿ ಪ್ರತಿ ವರ್ಷವೂ ಸೇರುತ್ತಿದ್ದರು. Every year District Board Presidents used to meet and discuss matters common to District Boards.

Sri C. J. MUCKANNAPPA (Gubbi).—The contention of the Hon'ble Minister is not that. It is not on the Statement.

Mr. CHAIRMAN.—The Hon'ble Member may not give information. It is between this Hon'ble Member and the Minister. Let the Hon'ble Member proceed.

ಶ್ರೀ ಕೆ. ಕೆಂಚಪ್ಪ.—ಅಲ್ಲದೆ, ಇಲ್ಲಿ ಹಿಂದೆ ರಸ್ತೆ ಮುಂತಾದುವುಗಳನ್ನು ಮಾಡಲು ಒಂದು ಎಂಜಿನಿಯರಿಂಗ್ ಸಿಬ್ಬಂದಿಯನ್ನಿಟ್ಟುಕೊಂಡಿದ್ದರು. ಆ ಸಿಬ್ಬಂದಿಗೂ ಮತ್ತು ಸರ್ಕಾರದ ಮರಾಮತ್ತು ಇಲಾಖೆಯ ಸಿಬ್ಬಂದಿಗೂ ಏನು connection ಕೊಡುತ್ತೀರಿ? ಅಥವಾ ನೀವು ಈ ರೋಡುಗಳನ್ನು ಇಬ್ಬಂದಿ ಸರ್ಕಾರವನ್ನೇನಾದರೂ ಇಟ್ಟುಕೊಂಡು. . . .

ಒಬ್ಬ ಸದಸ್ಯರು.—ಇಬ್ಬಂದಿ ಸರ್ಕಾರ ಎಂದರೇನು?

Sri K. KENCHAPPA.—It is not possible to carry out works of the Taluk Board with the help of the N.E.S. engineering establishment. There should be a separate engneering establishment for the Taluk Boards.

ಆದ್ದರಿಂದ ತಾವು ಈ ಜಿಲ್ಲಾ ಬೋರ್ಡಿನ ರಸ್ತೆ ಕೆಲಸಕಾರ್ಯಗಳನ್ನು ಮರಾಮತ್ತು ಇಲಾಖೆಯಿಂದ ಮಾಡಿಸತಕ್ಕ ಒಂದು ವ್ಯವಸ್ಥೆಯನ್ನು ಮಾಡುವುದಾದರೆ ಎಷ್ಟು ಮಟ್ಟಿಗೆ ಈ ತಾಲ್ಲೂಕು ಬೋರ್ಡ್ ಕಂಟ್ರೋಲ್ ಇರುತ್ತದೆ? ಕಂಟ್ರೋಲ್ ಇಲ್ಲದೇ ಇರತಕ್ಕ ಕೆಲಸ ಎಷ್ಟು ಮಟ್ಟಿಗೆ ಆಗುತ್ತದೆ?

ಶ್ರೀ ಆರ್. ಚೆನ್ನಿಗರಾಮಯ್ಯ.—ಎಲ್ಲಿ ನಿಮಗೆ ಅನುಮಾನ ಬರುತ್ತದೆಯೋ ಅಲ್ಲಿ ಪರಿಹಾರಮಾಡಿದರೆ

(ಶ್ರೀ ಆರ್. ಚೆನ್ನಿಗರಾಮಯ್ಯ)

ಒಳ್ಳೆಯದು. ತಾಲ್ಲೂಕು ಬೋರ್ಡ್ ಕೆಲಸಕಾರ್ಯಗಳನ್ನು ಪಬ್ಲಿಕ್‌ವರ್ಕ್ಸ್ ಡಿಪಾರ್ಟ್‌ಮೆಂಟಿನವರು ಮಾಡಿದರೂ ಕೂಡ ಅವರ ಅಧೀನಲ್ಲಿರುವುದಿಲ್ಲ, ಎಷ್ಟು ಸಮರ್ಪಕವಾಗಿ ಮಾಡುತ್ತಾರೆ ಎಂದು ಅನುಮಾನ ವ್ಯಕ್ತಮಾಡಿದರು. ಅದಕ್ಕೆ ನಮ್ಮ ಉತ್ತರ, ಎನ್. ಇ. ಎಸ್. ಬ್ಲಾಕ್ ಇರುವ ಕಡೆಗಳಲ್ಲಿ ಏನೂ ತೊಂದರೆ ಆಗುವುದಿಲ್ಲ. ಪ್ರತ್ಯೇಕವಾದ ಇಲಾಖೆ ಇದೆ. ನಮ್ಮ ಉದ್ದೇಶವಾದರೂ separate engineers ಮತ್ತು separate establishment, ಕೇಡರ್ ಇರಬೇಕೆಂದು ಇದೆ. ಈಗ ಶೇಕಡ 12 ಕೊಡುತ್ತಾ ಇದ್ದಾರೆ. ಅದನ್ನು ಲೆಕ್ಕ ಹಾಕಿದರೆ separate engineering staff ಇಟ್ಟುಕೊಂಡರೆ ಇನ್ನೂ ಕಡಮೆ ವರ್ಕ್‌ಔಟ್ ಆಗುತ್ತದೆ. ಆ ದೃಷ್ಟಿಯಿಂದ ಮಾತನಾಡಬೇಕು.

ಶ್ರೀ ಕೆ. ಕೆಂಚಪ್ಪ.—ತಾವು ಹೇಳುವ ರೀತಿಯಲ್ಲಿ ಮಾಡುವುದಾದರೆ ಅದು ನಡೆಯುವುದಿಲ್ಲ ಎಂದು ಹೇಳುತ್ತೇನೆ. ಏಕೆಂದರೆ ಎನ್. ಇ. ಎಸ್. ಬ್ಲಾಕ್ ನಲ್ಲಿರತಕ್ಕ ಸಿಬ್ಬಂದಿ ಉಪಯೋಗಿಸಿಕೊಳ್ಳುವುದು ಎಂದರೆ ಅದು ನಡೆಯುವುದು ಎಷ್ಟು ದಿವಸ? ಜಿಲ್ಲಾ ಬೋರ್ಡು ಖಾಯಂ ಆಗಿದೆ. ಅದು ಖಾಯಂ ಏ? ಹಂಗಾಮಿಯೇ? ಅದು ಹಂಗಾಮಿ ಆದ್ದರಿಂದ ಕೆಲವಾರು ದಿವಸಗಳಾದನಂತರ ಕೆಲವು ಸಿಬ್ಬಂದಿ ಬಿಟ್ಟುಹೊರಟು ಹೋಗುತ್ತಾರೆ. ಅದನ್ನು ತಾವು ಯೋಚನೆಮಾಡಬೇಕಾಗುತ್ತದೆ. ತಾವು ಹೇಳುವ ರೀತಿಯಲ್ಲಿ ಇದು ನಡೆಯುವುದಿಲ್ಲ. ಇದು ಅನುಭವದ ಮಾತಲ್ಲ ಎಂದು ಹೇಳುತ್ತೇನೆ. ತಾಲ್ಲೂಕು ಬೋರ್ಡ್‌ಗಳಲ್ಲಿ ಒಂದು ಇಂಜನಿಯರಿಂಗ್ ಎಸ್ಟಾಬ್ಲಿಷ್‌ಮೆಂಟ್ ಇಟ್ಟುಕೊಳ್ಳದೇ ಅದು ಒಂದು ಅಡ್ವೈಸರಿ ಬಾಡಿ ಎಂದು ಹೇಳಿದ್ದೀರಿ. ಅಡ್ವೈಸರಿ ಎಂದರೆ ಸಲಹೆ ಕೊಡುವ ಸಮಿತಿ ಆಯಿತು:—

The advice of the Taluk Development Board may be respected, or may not be respected. The N.E.S. officers are not bound to follow it; they are not bound to obey it. Where is the provision to show that they are bound to obey it? It is only an advisory body.

ಆದ್ದರಿಂದ ಇದನ್ನು ತಾವು ಆಲೋಚನೆ ಮಾಡಬೇಕಾಗುತ್ತದೆ. ಇದು ಅನುಭವದಿಂದ ಮಾತನಾಡತಕ್ಕ ಮಾತು. ತಾವು ತುಂಬ ಯೋಚನೆಮಾಡಬೇಕಾಗುತ್ತದೆ.

ಈ ರೀತಿ ಮಾಡತಕ್ಕದ್ದು ರಸ್ತೆ ಒಂದೇ ಅಲ್ಲ; ಬಾವಿಯನ್ನೂ ಇಟ್ಟಿದ್ದೀರಿ. ಇದುವರೆಗೂ ಸರ್ಕಾರದವರೇ ಜವಾಬ್ದಾರಿಯನ್ನು ಹೊತ್ತಿದ್ದೀರಿ. ಜಿಲ್ಲಾ ಬೋರ್ಡ್‌ನವರಿಗೆ ಆ ಜವಾಬ್ದಾರಿ ಇರಲಿಲ್ಲ ಎಂದು ಅಲ್ಲ; ಅವರಿಗೂ ಇತ್ತು. ಆದರೆ ಸರ್ಕಾರದ ಫಂಡ್‌ನಿಂದ ಅವರಿಗೆ ಹಣ ಒದಗಿಸುತ್ತಾ ಇದ್ದೀರಿ. ಅದಕ್ಕೆ ಇಂಜನಿಯರಿಂಗ್ ಎಸ್ಟಾಬ್ಲಿಷ್‌ಮೆಂಟ್ ಬೇಕಾಗುತ್ತದೆ. ಹೀಗೆಯೇ ಸ್ಯಾನಿಟೇಷನ್ ಎಂದರೆ ಚರಂಡಿಮಾಡಿಸುವುದು ಅಥವಾ ಆರೋಗ್ಯದ ದೃಷ್ಟಿಯಿಂದ ಕೆಲಸ ಮಾಡುವುದಕ್ಕೂ ಸಹ ಇಂಜನಿಯರಿಂಗ್ ಎಸ್ಟಾಬ್ಲಿಷ್‌ಮೆಂಟ್ ಬೇಕಾಗುತ್ತದೆ. ಇದೆಲ್ಲಾ ನಾನು ಹೇಳುವುದು ಖಚಿತವಾದುದು. ಇದನ್ನು ಕೇಳಬೇಕು ಮತ್ತು ಇದರ ಮೇಲೆ ತಾವು ಉತ್ತರ ಕೊಡಬೇಕಾಗಿದೆ. ಆದ್ದರಿಂದ ದಯುವಿಟ್ಟು ಇದರ ವಿಚಾರದಲ್ಲಿ ತುಂಬ ಆಲೋಚನೆಮಾಡಬೇಕು. ಜಿಲ್ಲಾ ಬೋರ್ಡಿನ ಕೆಲಸ ಎಂದರೆ ಸಣ್ಣ ಮಕ್ಕಳು ಮನೆಕಟ್ಟಿ ಅದು ಚೆನ್ನಾಗಿಲ್ಲ ಎಂದು ಕೆಡಿಸಿ ಮತ್ತೆ ಕಟ್ಟುತ್ತಾರೆ. ಅರೀತಿ ಕೆಲಸವಲ್ಲ ಜಿಲ್ಲಾ ಬೋರ್ಡಿನ ರಚನೆ ಎನ್ನುವುದು ಮಕ್ಕಳ ಆಟವಾಗಿದೆ. 1952 ರಿಂದ ಇದುವರೆಗೂ ನಡೆದುಕೊಂಡು ಬಂದಿರುವ ವಿಧಾನ ನೋಡಿದರೆ, ಅವೊತ್ತಿನ ದಿವಸ ಡೆವಲಪ್‌ಮೆಂಟ್ ಬೋರ್ಡ್ ರಚನೆ ಆಗುತ್ತದೆ ಎಂದು ಹೇಳಿದಿರಿ ಆಗಲೂ ತಾವೇ ಮಾನ್ಯ ಸಚಿವರಾಗಿದ್ದೀರಿ. ಅದಕ್ಕಿಂತ ಹಿಂದೆಯೂ ಇದ್ದೀರಿ.

ಶ್ರೀ ಆರ್. ಚೆನ್ನಿಗರಾಮಯ್ಯ.—1952ರಲ್ಲಿ ಹೊಸದಾಗಿ ಮಂತ್ರಿಮಂಡಲ ಬಂತು, ಆಗ ನಾನಿರಲಿಲ್ಲ.

ಶ್ರೀ ಕೆ. ಕೆಂಚಪ್ಪ.—ಇರಲಿ. ತಾವಿಲ್ಲದಿದ್ದರೆ ತಮ್ಮ ಕಡೆಯವರು ಇದ್ದರು. ಕಾಂಗ್ರೆಸ್‌ನವರು ಇದ್ದರು. ಜಿಲ್ಲಾ ಬೋರ್ಡಿಗೆ ಸಂಬಂಧಪಟ್ಟಂತೆ ಒಂದು ಕಮಿಟಿ ನೇಮಕ ಮಾಡಿದರು. ಆ ಕಮಿಟಿಯ ರಿಪೋರ್ಟು ಎಲ್ಲಾ ಗೆದ್ದಲುಪಾಲು ಆಯಿತು. ಇದನ್ನು ನೋಡಿದರೆ ಮಕ್ಕಳ ಆಟದಂತೆ ಕಾಣುತ್ತದೆ. ರಾಜ್ಯಭಾರದ ವಿಚಾರದಲ್ಲಿ ಹೀಗೆ ಆಗಬಾರದು ಎಂದು ವಿಷಾದದಿಂದ ಹೇಳುತ್ತಾ ಇದ್ದೇನೆ. ಈ ಹೆಲ್ತ್ ಡಿಪಾರ್ಟ್‌ಮೆಂಟ್ ತೆಗೆದುಕೊಂಡರೆ ಹೆಲ್ತ್ ಇನ್ಸ್‌ಪೆಕ್ಟರನ್ನು ನೇಮಕ ಮಾಡಬೇಕು, ವ್ಯಾಕ್ಸಿನೇಟರುಗಳನ್ನು ನೇಮಕವಾಡಬೇಕು. ಈ ರೀತಿ ಎಷ್ಟೋ ಬಾಬುಗಳು ಇವೆ. ಅವಕ್ಕೆ ಸಿಬ್ಬಂದಿ ಎಷ್ಟು ಬೇಕಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ಒಂದೊಂದು ತಾಲ್ಲೂಕಿಗೆ ಒಬ್ಬೊಬ್ಬ ಹೆಲ್ತ್ ಇನ್ಸ್‌ಪೆಕ್ಟರನ್ನು ನೇಮಕಮಾಡಲು ಶಕ್ತಿ ಇಲ್ಲ ಎಂದು ಹೇಳಿ ಎರಡು-ಮೂರು ತಾಲ್ಲೂಕಿಗೆ ಒಬ್ಬ ಹೆಲ್ತ್ ಇನ್ಸ್‌ಪೆಕ್ಟರನ್ನು, ವ್ಯಾಕ್ಸಿನೇಟರನ್ನು ನೇಮಕಮಾಡಿದರು. ಈಗ ಒಂದು ತಾಲ್ಲೂಕಿಗೆ ಒಬ್ಬ ವ್ಯಾಕ್ಸಿನೇಟರನ್ನು ನೇಮಕಮಾಡಬೇಕಾಗಿದ್ದರೆ ಬಹಳ ಕಷ್ಟವಾಗುತ್ತದೆ. ಅದಕ್ಕೆ ಯಾವ ರೀತಿ ದುಡ್ಡು ಒದಗಿಸಿದ್ದೀರಿ? ಈ ಒಂದು ವ್ಯವಸ್ಥೆಯಿಂದ ಜನಗಳ ಹಿತಸಾಧನೆಯಾಗಬೇಕು. ಆದ್ದರಿಂದ ಆ ರೀತಿ ಸಂಪೂರ್ಣವಾಗಿ ಸಮರ್ಪಕವಾಗಿ ಕೆಲಸ ನಡೆಯುವ ದೃಷ್ಟಿಯಿಂದ ಇದನ್ನು ನಾವು ನೋಡಬೇಕಾಗಿದೆ. ಆ ದೃಷ್ಟಿಯಿಂದ ಕಾನೂನು ರಚನೆ ಮಾಡಲು ಎಷ್ಟುಮಟ್ಟಿಗೆ ಆಲೋಚನೆ ಮಾಡಿದ್ದೀರಿ ಎಂದು ನಾನು ಯೋಚನೆ ಮಾಡುತ್ತಾ ಇದ್ದೇನೆ. ಇದರಲ್ಲಿ ಅಂಥಹ ಸಂತೋಷದಿಂದ ಹೇಳತಕ್ಕ ವಿಷಯವೇನಿಲ್ಲ. ಈ ಸ್ಕೂಲಿನ ಜವಾಬ್ದಾರಿಯನ್ನು ತೆಗೆದುಕೊಳ್ಳಿ. ಯಾವ ರೀತಿ ಮಾಡುತ್ತೀರಿ? ಸರ್ಕಾರಿ ಸ್ಕೂಲುಗಳೂ ಇವೆ, ಗ್ರಾಂಟ್-ಇನ್-ಏಡ್ ಸ್ಕೂಲುಗಳೂ ಇವೆ. ಯಾವ ರೀತಿ ಅದಕ್ಕೂ ಇದಕ್ಕೂ ಲಿಂಕ್ ಮಾಡುತ್ತೀರಿ? ಜಿಲ್ಲಾ ಬೋರ್ಡಿನವರಿಗೆ ಸರ್ಕಾರದವರು ಸ್ವಲ್ಪ ಗ್ರಾಂಟ್ ಕೊಡುತ್ತಾರೆ, ಅಲ್ಲಿಗೂ ಎಷ್ಟೋ ಅನಾನುಕೂಲವಾಗಿದೆ. ಇವತ್ತಿನ ದಿವಸ ಜಿಲ್ಲಾ ಬೋರ್ಡ್ ಹೈಸ್ಕೂಲಿಗೂ, ಸರ್ಕಾರಿ ಹೈಸ್ಕೂಲಿಗೂ ಸಂಪರ್ಕ ಇರುವ ಒಂದು ರೀತಿಯಲ್ಲಿ ವ್ಯವಸ್ಥೆ ಮಾಡಬೇಕು ಎಂದು ಹೇಳಿ ಎಷ್ಟೋ ಜನರ ಬಾಯಲ್ಲಿ ಕೇಳಿದ್ದೇವೆ. ನಾನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲವು ದಿವಸಗಳ ಹಿಂದೆ ಪ್ರವಾಸಮಾಡಿ ಬಂದೆ. ಆ ಜಿಲ್ಲೆಯಲ್ಲಿ ಪ್ರತಿಯೊಂದು ಸ್ಕೂಲಿನಲ್ಲೂ ಹೋಗಿ ನೋಡಿಕೊಂಡು ಬಂದೆ. ಬಹಳ ಸಂತೋಷವಾಯಿತು. ಪ್ರತಿಯೊಂದು ಸ್ಕೂಲಿನಲ್ಲೂ ಲೈಬ್ರರಿ ಇದೆ. ಲ್ಯಾಬೊರೇಟರಿ ಇದೆ. ಅದೇಕೆ ಇಲ್ಲಿ ಮಾಡಿಲ್ಲ? ಇಲ್ಲಿ ಸರಿಯಾದ ಲ್ಯಾಬೊರೇಟರೀ ಇಲ್ಲ, ಲೈಬ್ರರಿ ಇಲ್ಲ, ಸೈನ್ಸ್ ಎಕ್ವಿಪ್‌ಮೆಂಟ್ ಇಲ್ಲ. ಏಕೆ ಹೇಳುತ್ತೇನೆ ಎಂದರೆ ಪ್ರೈಮರಿ ಸ್ಕೂಲಿನ ಜವಾಬ್ದಾರಿಯನ್ನು ನೀವು ತೆಗೆದುಕೊಂಡಿಲ್ಲವೇ? ಜಿಲ್ಲಾ ಬೋರ್ಡಿನ ಆಡಳಿತ ನಡೆಸತಕ್ಕವರು ಯಾರು

ಹೋಗಿ, ಎಷ್ಟು ಮಟ್ಟಿಗೆ ಸ್ಟೈನ್ಸ್ ಎಕ್ವಿಪ್‌ಮೆಂಟ್ ಇದೆ, ಕೊಡುವ ಹಣ ಖರ್ಚಿಗೆ ಸಾಕಾಗುತ್ತದೆಯೇ, ಎಷ್ಟು ಬೇಕು, ಯಾವ ರೀತಿ ಅವರು ಕೆಲಸಕಾರ್ಯ ನಡೆಸುತ್ತಾರೆ ಎಂಬುದನ್ನು ನೋಡಿದ್ದಾರೆ? ಸರ್ಕಾರಿ ಸ್ಕೂಲಿಗೂ ಗ್ರಾಮಪಂಚಾಯಿತಿ ಅವರು ನಡೆಸತಕ್ಕ ಸ್ಕೂಲ್‌ಗೂ ಯಾವ ರೀತಿಯ ಒಂದು ಸಂಬಧವನ್ನು ಕಲ್ಪಿಸುತ್ತೀರಿ? ಅದರ ವಿಚಾರ ಏನು? ಎಷ್ಟು ಖರ್ಚು ಬಂದೀತು? ಈಗಿರತಕ್ಕ ಸಿಬ್ಬಂದಿ ಇಟ್ಟು ಕೊಳ್ಳುತ್ತೀರಾ? ಅಥವಾ ಬಿಟ್ಟು ಬಿಡುತ್ತೀರಾ?

ಆರ್. ಚೆನ್ನಿಗರಾಮಯ್ಯ.—ಗ್ರಾಮಪಂಚಾಯಿತಿ ನಡೆಸತಕ್ಕ ಸ್ಕೂಲು ಯಾವುದೂ ಇಲ್ಲ.

4 P.M.

ಶ್ರೀ ಕೆ. ಕೆಂಚಪ್ಪ.—ಗ್ರಾಮಪಂಚಾಯಿತಿಗಳಿಗೆ ತಾಲ್ಲೂಕು ಬೋರ್ಡುಗಾಗಿ ವಿದ್ಯಾಭ್ಯಾಸದ ಜವಾಬ್ದಾರಿಯನ್ನು ಕೊಟ್ಟಿಲ್ಲ. ಆದ್ದರಿಂದ ಅದಕ್ಕೂ ಇದಕ್ಕೂ ಯಾವ ರೀತಿಯಾಗಿ ಸಂಬಂಥ ಬೆಳಸಬೇಕು? ಸಂಸ್ಕೃತಿ ಪ್ರಚಾರ, ಸಮಾಜ ಕಲ್ಯಾಣ ಕೇಂದ್ರ ಮುಂತಾದ ಕಣ್ಣಿಗೆ ಕಾಣತಕ್ಕಂಥ ಕೆಲಸಗಳನ್ನು ನಡೆಸಿಕೊಂಡು ಬಂದರೆ ಆಯಿತೇ? ಇದನ್ನು ಸ್ವಲ್ಪ ಯೋಚನೆಮಾಡ ಬೇಕು. ಯಾವ ರೀತಿಯಾಗಿ ಮಾಡುತ್ತೇವೆ? ಸಂಬಂಧ ಹೇಗೆ ಕಲ್ಪಿಸಬೇಕು? ಖಂಡಿತವಾಗಿ ಬಹಳ ದಿವಸ ನಡೆಯುವುದಿಲ್ಲವೆಂದು ನಾನು ಹೇಳುತ್ತೇನೆ:

Mr. CHAIRMAN.—As the Bill is going to the Select Committee, the principle, details, etc., may be delegated to the Select Committee.

Sri H. M. CHANNABASAPPA (Krishnarajanagar).—I would like to submit that this is a very important Bill and any doubt that members might have must be made known and we should suggest suitable remedies. Even on matters of policy members ought to have full time to express themselves on all important questions. I would, therefore, like to submit that we should not hurry up this. We are all anxious that this Bill should become law and local self-Government must commence functioning in all sectors. So, let there not be any restrictions on members to express their views.

Mr. CHAIRMAN.—I am not putting any restrictions. What I want to suggest is that other members may not go on disturbing the Hon'ble Member who is speaking.

Sri H. M. CHANNABASAPPA.—Before the Bill goes to the Select Committee, the members must know all the view points. Therefore a full dress debate must go on.

Sri J. B. MALLARADHYA.—In respect of some matters possibly my friend the Leader of the Opposition refers to clause 224, page 111.

Sri H. M. CHANNABASAPPA.—In order to understand the views of the member speaking, it is a healthy convention that any member may intervene and if the member speaking yields ask the member certain clarifications. That is the healthy convention we have developed, because the intention is only to understand the member more clearly and not to intervene.

Mr. CHAIRMAN.—I am not going against that convention. But, I do not want discussion and correction across the table.

Sri K. KENCHAPPA.—In page 130, para 3 it is stated :

> "Taluk Development Boards will be constituted at the Taluk level to generally supervise the working of the Panchayats and to perform the functions mentioned in clauses 127 and 128. Government may transfer other duties now carried on by the development departments like, Public Health, Education, Agriculture, Animal Husbandry, Public Works, etc."

What more do you want?

Sri R. CHENNIGARAMAIAH.—Government may transfer other duties, but not the management of schools.

ಶ್ರೀ ಕೆ. ಕೆಂಚಪ್ಪ.—ಸ್ವಾಮಿ, ಗ್ರಾಮಪಂಚಾಯತಿಗಳಿಗೆ, ತಾಲ್ಲೂಕು ಬೋರ್ಡುಗಳಿಗೆ ಎಷ್ಟರಮಟ್ಟಿಗೆ ಜವಾಬ್ದಾರಿಯನ್ನು ಕೊಟ್ಟಿದ್ದಾರೆಎಂಬುದನ್ನು ಯೋಚನೆ ಮಾಡಬೇಕು. ಕೊಡತಕ್ಕಂಥ ಅಲ್ಪ ಹಣದಿಂದ ಇದು ಸಾಧ್ಯವೆ? ಎಂಬ ಮುಖ್ಯ ಪ್ರಶ್ನೆ ಕೇಳುತ್ತೇನೆ. ಈ ರೀತಿ ಸರಕಾರದವರು ತಾವು ಹೊರಬೇಕಾದ ಜವಾಬ್ದಾರಿಯನ್ನು ಸ್ಥಳೀಯ ಸಂಸ್ಥೆಗಳ ಮೇಲೆ ಹೊರಿಸಿದರೆ ದೇಶದ ಹಿತಸಾಧನೆಯಾಗುತ್ತದೆಯೇ! ಈ ಕಾರ್ಯ ಅಷ್ಟು ಸುಲಭಸಾಧ್ಯವೆಂದು ಹೇಳುವುದಕ್ಕಾಗುವದಿಲ್ಲ, ಆಲೋಚನೆ ಮಾಡಬೇಕಾಗಿದೆ ಮೊಗಂ ಆಗಿ ಏನಾದರೂ ಹೇಳಿದರೆ ಅದು ಸರಿಯಲ್ಲ, ಜಿಲಾ ಬೋರ್ಡು ಮಾಡತಕ್ಕಂಥ ರಸ್ತೆ ಜವಾಬ್ದಾರಿಯನ್ನು ಸರಕಾರ ಮರಾಮತ್ ಇಲಾಖೆಯ ಇಂಜಿನಿಯರ್ ಮುಖಾಂತರ ಮಾಡಿಸಬೇಕಾಗುತ್ತದೆ. ಇಲ್ಲದೇ ಹೋದರೆ ಕೆಲಸ ಸಮರ್ಪಕವಾಗಿ ಆಗುವುದಿಲ್ಲ. ಒಂದು ತಾಲ್ಲೂಕಿಗೆ ಒಬ್ಬ ವ್ಯಾಕ್ಸಿನೇಟರ್ ನೇಮಕವಾದುವುದು ಆಗುವುದಿಲ್ಲ. ಶ್ರೀ ಚನ್ನಬಸಪ್ಪ ಅಂಥವರು ಇನ್ನೂ ಅನೇಕ ಮಾನ್ಯ ಸದಸ್ಯರು ಜಿಲ್ಲಾ ಬೋರ್ಡುಗಳಲ್ಲಿ ಕೆಲಸಮಾಡಿ ಅನುಭವ ಪಡೆದಿದ್ದಾರೆ. ಅನೇಕ ಸಾರಿ ಸರಕಾರಕ್ಕೆ ಈ ಬಗ್ಗೆ ಮನವಿಮಾಡಿ ಕೊಂಡಿದ್ದೇವೆ. ಒಂದು ಸರಿಯಾದ ಕಂಟ್ರೋಲ್ ಕೆಲಸದ ಮೇಲೆ ಉಳಿಯುವುದಿಲ್ಲ. ಜಿಲ್ಲಾ ಬೋರ್ಡ್ ಅಧ್ಯಕ್ಷರಿಗೆ ಕೈ ಜಾಡಿಸಿಕೊಂಡು ಕುಳಿತು ನೋಡ

(ಶ್ರೀ ಕೆ. ಕೆಂಚಪ್ಪ)

ತಕ್ಕಂಥ ಮನಸ್ಸು ಆಗಿರುತ್ತದೆ. ಇಂಥಿಂಥ ಸಮಾಚಾರ ನಡೆಯುತ್ತಿದೆ, improve ಆಗುವುದು ಸಾಧ್ಯವಿಲ್ಲ ಎಂಬಂತಾಗಿದೆ. ಈ ಜಿಲ್ಲಾ ಬೋರ್ಡುಗಳು ಹೈಸ್ಕೂಲು ನಡೆಸಲು ಒಪ್ಪಲಿಕ್ಕಿಲ್ಲ. ಜಿಲ್ಲಾ ಬೋರ್ಡು ಅಧ್ಯಕ್ಷರು ಹೇಳಿ ಬೇರೆ ಕಾನೂನು ಮಾಡಿಸಿಕೊಂಡಿದ್ದಾರೆ. ಇದನ್ನು ನಾನು ನನ್ನ ಅನುಭವದಿಂದ ಹೇಳುತ್ತೇನೆ.

ಬೇರೆಯವರು ಯಾರಾದರೂ ಕೆಲಸಮಾಡಿದರೆ ಕೆಲಸ ಸಮರ್ಪಕವಾಗಿ ಆದೀತೆಂಬ ನಂಬಿಕೆ ನಮಗಿಲ್ಲ. ಯಾವ ದೃಷ್ಟಿಯಿಂದ ನೋಡಿದರೂ ಸಹಿತ ಹಣ ದುರುಪಯೋಗವಾಗುವಂತೆ ಕಾಣುತ್ತದೆ. ತಾಲ್ಲೂಕು ಬೋರ್ಡುಗಳಿಗೆ ಎಷ್ಟರಮಟ್ಟಿಗೆ ಹಣದ ಬಲ ಕೊಡುತ್ತೀರಿ, ಗ್ರಾಮಪಂಚಾಯಿತಿಗಳಿಗೆ ಎಷ್ಟು ಖರ್ಚಾಗುತ್ತದೆ, ಅಧ್ಯಕ್ಷರ ಟಿ.ಎ. ಮೊದಲಾದವಕ್ಕೆ ಎಷ್ಟು ಖರ್ಚಾಗುತ್ತದೆ, ಸಿಬ್ಬಂದಿ ಖರ್ಚೆಷ್ಟು ಎಂಬುದನ್ನು ಸರಿಯಾಗಿ ತಿಳಿಸಬೇಕು. ತಾಲ್ಲೂಕು ಬೋರ್ಡುಗಳಿಗೆ ತಾವು ಕೊಡುವ ಹಣ ಬರೀ ಸಿಬ್ಬಂದಿಗಾಗಿ ಖರ್ಚಾಗಿ ಉಳಿದ ಕೆಲಸಕ್ಕೆ ಮೂರುಕಾಸೂ ಸಹ ಉಳಿಯದಿದ್ದರೆ ಪ್ರಯೋಜನವೇನು ! ಸರಿಯಾದ ವ್ಯವಸ್ಥೆ ಮಾಡದಿದ್ದರೆ ಸರ್ಕಾರದವರೇ ಸ್ವಂತ ಜವಾಬ್ದಾರಿಯಿಂದ ಈ ಸಂಬಂಧವಾದ ಕೆಲಸಕಾರ್ಯಗಳನ್ನು ನಿರ್ವಹಿಸಬೇಕಾದೀತು. ಜಿಲ್ಲಾ ಡೆವಲಪ್‌ಮೆಂಟ್ ಕೌನ್ಸಿಲ್ ಎಂದು ಬೇರೆ ಮಾಡಬೇಕೆಂದಿದ್ದೀರಿ. ಅದಕ್ಕೇನೂ ಅಧಿಕಾರವಿಲ್ಲ, ದುಡ್ಡೂ ಇಲ್ಲ, ಕೆಲಸವೂ ಇಲ್ಲ. ಅದನ್ನೇಕೆ ಮಾಡಿದೆಯೋ ಅರ್ಥವಾಗುವುದಿಲ್ಲ. ನಾಮಕರಣ ಸದಸ್ಯರನ್ನು ನೇಮಿಸಿ ಯಾರನ್ನೋ ಸಮಾಧಾನಪಡಿಸುವುದರಿಂದ ದೇಶಕ್ಕೆ ಪ್ರಯೋಜನವಾಗುವುದಿಲ್ಲ. ಅಪೆಲೇಟ್ ಅಥಾರಿಟಿ ಇದ್ದಹಾಗೆ ಡೆವಲಪ್‌ಮೆಂಟ್ ಕೌನ್ಸಿಲ್ ಇದ್ದು ಅದು ಗ್ರಾಮಪಂಚಾಯಿತಿಗಳ ಸಮಸ್ಯೆಗಳನ್ನು ತೀರ್ಮಾನಮಾಡಬೇಕೆಂದು ಹೇಳಿದೆ. ಅಂಥಾದ್ದನ್ನು ಏಕೆ ಮಾಡಬೇಕು ! ಚುನಾಯಿತ ಸದಸ್ಯರಿಂದ ಕೂಡಿದ ತಾಲ್ಲೂಕು ಬೋರ್ಡು ನಾಮಕರಣ ಸದಸ್ಯರಿಂದ ಕೂಡಿದ ಕೌನ್ಸಿಲ್ ಅಧೀನವಾಗಿ ಕೆಲಸಮಾಡುವುದು ಎಷ್ಟು ಸಮರ್ಪಕವೆಂಬುದನ್ನು ಯೋಚನೆ ಮಾಡಬೇಕು. ನಾಮಕರಣ ಸದಸ್ಯರು ಚುನಾಯಿತ ಸದಸ್ಯರನ್ನು ಕಂಟ್ರೋಲ್ ಮಾಡಬೇಕು, ಹಿಂದೆ ಒಂದು ಕೋ ಆರ್ಡಿನೇಷನ್ ಕಮಿಟಿ ಎಂದು ಮಾಡಿದ್ದರೆಂದು ಈಗ ಜಿಲ್ಲಾ ಡೆವಲಪ್‌ಮೆಂಟ್ ಕಮಿಟಿ ಮಾಡಬೇಕೆಂದಿದ್ದಾರೆ. ಕೋ ಆರ್ಡಿನೇಷನ್ ಕಮಿಟಿಯಲ್ಲಿ ಜಿಲ್ಲಾ ಬೋರ್ಡು ಪ್ರೆಸಿಡೆಂಟರು ವಗೈರೆಯವರು ಕುಳಿತು ಮೀಟಿಂಗ್ ಮಾಡುತ್ತಾ ಇದ್ದರು ; ಅದರಿಂದ ಮೂರು ಕಾಸಿನ ಕೆಲಸವೂ ಆಗಲಿಲ್ಲ. ಮತ್ತೆ ಅದೇರೀತಿ ಹೊಸದಾಗಿ ಒಂದು ಕೌನ್ಸಿಲ್ ಮಾಡ ಲಿದ್ದಾರೆ. ದಯಪಿಟ್ಟು ಇಂಥ ಕೆಲಸಕ್ಕೆ ಕೈಹಾಕ ಬಾರದು.

ಈಗ ಕೊಡುವ ಶೇಕಡ 50 ಭಾಗ ಗ್ರಾಮಾಭಿವೃದ್ಧಿಗೆ ಸಾಲದು. ಅದರಿಂದ ಹೆಚ್ಚು ಗ್ರಾಮಾಭಿವೃದ್ಧಿ ಯಾಗುವುದಿಲ್ಲ. ಶೇಕಡ 30 ಭಾಗ ತಾವು ಗ್ರಾಮಾಭಿವೃದ್ಧಿಗಾಗಿ ಕೊಡುವುದರಲ್ಲಿ ತಾಲ್ಲೂಕು ಬೋರ್ಡಿಗೆ 15 ಭಾಗ, ಗ್ರಾಮಪಂಚಾಯಿತಿಗಳಿಗೆ 15 ಭಾಗ ಹೋಗುತ್ತದೆ. ಆಯಾ ತಾಲ್ಲೂಕುಗಳಲ್ಲಿ ಹುಟ್ಟುವಳಿಯೇನಿದೆ ಮತ್ತು ಆಯಾ ಗ್ರಾಮ ಪಂಚಾಯಿತಿಗಳಲ್ಲಿ ಹುಟ್ಟುವಳಿಯೇನಿದೆ ಅದರಿಂದ ಸಾಕಷ್ಟು ಅಭಿವೃದ್ಧಿ ಸಾಧಿಸಲು ಸಾಧ್ಯವಾಗುವುದಿಲ್ಲ. ತಾವು ಹೇಳುವಪ್ರಕಾರ ಜಮೀನು ಕಂದಾಯದಿಂದ ಬರುವ ನಾಲ್ಕು ಕೋಟಿ ರೂಪಾಯಿಗಳ ವರಮಾನ ಕೊಡುವುದರಲ್ಲಿ ತಪ್ಪೇನೂ ಇಲ್ಲ. ಇದರಲ್ಲಿ ಒಂದು ಲೋಪವಿದೆ ; ತಮ್ಮ ಇಷ್ಟಾನುಸಾರ ಕೊಡುತ್ತೀರಿ ; ಇದು ಮನುಷ್ಯ ಸ್ವಭಾವ ; ಈರೀತಿ ಆಗಬಾರದು. ಈಗ ಸುಮಾರು ಎರಡುಕೋಟಿ ರೂಪಾಯಿಗಳ ಲ್ಯಾಂಡ್ ರೆವೆನ್ಯೂ ಬರುವುದು, ಮುಂದೆ ನೀರಾವರಿ ಕಂದಾಯ ಹೆಚ್ಚಿಸಿದಾಗ ಬೆಲೆ ಹೆಚ್ಚುವುದರಿಂದ ಯಾವುದಾದರೂ ಒಂದು ರೀತಿಯಿಂದ ಜನರ ಉತ್ಪತ್ತಿ ಹೆಚ್ಚಿ ಕಂದಾಯ ಹೆಚ್ಚಿಸಬಹುದು. ಬಡ್ಜೆಟ್ ಮೆಮೋರಾಂಡಂನಲ್ಲಿ ನೀರಾವರಿ ಕಂದಾಯ ಹೆಚ್ಚಿಸುವುದು ಸೂಕ್ತ ಎಂದು ಹೇಳಿದೆ. ಆಗ ನಾಲ್ಕು ಕೋಟಿ ರೂಪಾಯಿ ಬರಬಹುದು. ಅದರಲ್ಲಿ ಶೇಕಡ 50 ಭಾಗ ಗ್ರಾಮಪಂಚಾಯಿತಿಗಳಿಗೆ, ಶೇಕಡ 50 ಭಾಗ ಜಿಲ್ಲಾ ಬೋರ್ಡುಗಳಿಗೆ ಅಥವಾ 75 ಭಾಗ ಪಂಚಾಯಿತಿಗಳಿಗೆ 25 ಭಾಗ ಜಿಲ್ಲಾ ಬೋರ್ಡುಗಳಿಗೆ ಕೊಡಬೇಕು. ತಾಲ್ಲೂಕು ಬೋರ್ಡು ವಜಾಮಾಡಿದರೆ ಸಿಬ್ಬಂದಿಖರ್ಚು ಕಡಮೆಯಾಗಿ ಈಗಿರುವ ಉತ್ಪತ್ತಿ ಜೊತೆಗೆ ಅದೂ ಒದಗಿ ಸಹಾಯವಾಗುತ್ತದೆ. ಶೇಕಡ 75 ಭಾಗ ಜಮೀನು ಕಂದಾಯ ಕೊಡುವುದರಿಂದ ಕಾನ್‌ಸ್ಟಿಟ್ಯೂಷನ್‌ನಲ್ಲಿ ಬರೆದಿರುವಂತೆ ಗ್ರಾಮ ಪಂಚಾಯಿತಿಗಳು ಸೆಲ್ಫ್ ಸಫಿಷಿಯೆಂಟ್ ಆಗಬೇಕೆಂಬ ಉದ್ದೇಶ ಸಫಲವಾಗಬಹುದು. ಗ್ರಾಮಪಂಚಾಯಿತಿಗಳಿಗೆ ಈಗ ಗ್ರ್ಯಾಂಟು ರೂಪದಲ್ಲಿ, ಬಾವಿ ಮತ್ತು ರಸ್ತೆ ಮಾಡುವ ರೂಪದಲ್ಲಿ, ಗ್ರಾಮಗಳ ಅಭಿವೃದ್ಧಿ ದೃಷ್ಟಿಯಿಂದ ಕೊಟ್ಟಿರುವುದನ್ನೆಲ್ಲಾ ಲೆಕ್ಕ ಹಾಕಿದರೆ ನಾಲ್ಕು ಕೋಟಿ ರೂಪಾಯಿಗಳಿಗಿಂತ ಕಡಮೆಯಾಗುವುದಿಲ್ಲ, ಇನ್ನೂ ಹೆಚ್ಚಾಗುತ್ತದೆ. ಅಷ್ಟನ್ನು ಕೊಟ್ಟರೆ ಪ್ರತಿಯೊಬ್ಬರಿಗೂ ದಾಮಾಷಾಪ್ರಕಾರ ಸರಿಯಾಗಿ ಸಿಕ್ಕುತ್ತದೆ, ಪ್ರತಿಯೊಂದು ಗ್ರಾಮದ ಅಭಿವೃದ್ಧಿಯೂ ಆಗುತ್ತದೆ. ಈ ದೃಷ್ಟಿಯಿಂದ ಸಮನ್ವಯವಾಗಿ ದೊಡ್ಡ ಉಪಕಾರ ಮಾಡಿದಂತಾಗುತ್ತದೆ. ಭಾರತ ರಾಜ್ಯಾಂಗದ ಪ್ರಕಾರ ಸ್ವಯಂಸಂಪೂರ್ಣವಾಗಿರಬೇಕು, ಸರ್ಕಾರವನ್ನು ಬೇಡುವ ಪರಿಸ್ಥಿತಿ ಯಿರಬಾರದು. ಪಂಚಾಯಿತಿ ಸ್ವತಂತ್ರವಾಗಿರಬೇಕು ಎಂದೇನಿದೆ ಅದು ನೆರವೇರಲು ಅವಕಾಶವಾಗುತ್ತದೆ.

ಇನ್ನು ಚುನಾವಣೆ ವಿಚಾರ, ಈ ಮಸೂದೆ ಸೆಲೆಕ್ಟ್ ಕಮಿಟಿಗೆ ಹೋಗುತ್ತದೆ. ಇದು ಬಹಳ ತೊಡಕಿನಿಂದ ಕೂಡಿರುವ ಪ್ರಶ್ನೆ. ಜನರಲ್ ಎಲೆಕ್ಷನ್‌ನಲ್ಲಿ ತಾಲ್ಲೂಕು ಬೋರ್ಡುಗಳಿಗೆ ಜಿಲ್ಲಾ ಬೋರ್ಡುಗಳಿಗೆ ಪ್ರತಿಯೊಬ್ಬರೂ ಓಟು ಕೊಡಬೇಕಾದರೆ ಎಷ್ಟು ಕಷ್ಟ. ಅನುಕೂಲವೆಷ್ಟು ಎಂಬ ಅರಿವು ನಮಗಿದೆ. ಅದೇ ರೀತಿಯಲ್ಲಿ ಗ್ರಾಮಪಂಚಾಯಿತಿಗಳಿಗೇನು ಕಷ್ಟ ಬರುತ್ತದೆ ಎಂಬ ಅರಿವೂ ನಮಗಿದೆ. ಈ ಸಂದರ್ಭದಲ್ಲಿ ಈ ವಿಚಾರಕ್ಕೆ ಹೋಗುವುದಿಲ್ಲ. ಸೆಲೆಕ್ಟ್ ಕಮಿಟಿ ವರದಿ ಬಂದಮೇಲೆ ಹೇಳಬೇಕಾದ್ದನ್ನು ಹೇಳುತ್ತೇನೆ. ಈಗ ಎಕ್ಸ್‌ಪೆರಿಮೆಂಟ್ ಮಾಡುವ ಕಾಲವಲ್ಲ, ಪ್ರತಿಯೊಂದಕ್ಕೂ ಎಕ್ಸ್‌ಪೆರಿಮೆಂಟ್ ಮಾಡಲು ಕಾಲವಿಲ್ಲ, ಕಾಲ ಬಹಳ ಮಿಂಚಿಹೋಗಿದೆ, ಬಹಳ ದಿವಸದಿಂದ ತಡೆದಿದ್ದೇವೆ. ಇನ್ನೂ ಬರೀ ಮಾದರಿ ರೂಪದಲ್ಲಿ ಎಷ್ಟು ದಿವಸ ನಡೆಯಬೇಕೋ ಗೊತ್ತಾಗುವುದಿಲ್ಲ. ಈ ರೀತಿ ನಡೆಯುತ್ತಾ ಹೋದರೆ ಜನರ ಸಹನೆ ಮಿತಿಮೀರುತ್ತದೆ. ಇದುವರೆಗೆ ಜಿಲ್ಲಾ ಬೋರ್ಡುಗಳು ಪಕ್ಕಾ ಕೆಲಸಮಾಡಿವೆ, ಮೈಸೂರು ಸರ್ಕಾರ ಮಾಡಿರುವುದಕ್ಕಿಂತ ಹೆಚ್ಚು ಕೆಲಸ ಗ್ರಾಮಾಂತರ ಪ್ರದೇಶಗಳಲ್ಲಿ ಮಾಡಿವೆ, ಕೋಟ್ಯನುಕೋಟಿ ರೂಪಾಯಿ ಬೆಲೆಬಾಳುವ ಆಸ್ತಿ ಮಾಡಿವೆ. ಅದು ಈ ದಿವಸ ಹಾಳಾಗುವುದಕ್ಕೆ ಕಾರಣವಾಗಬಾರದು.

ಇವೊತ್ತಿನ ದಿವಸ ರಸ್ತೆಗಳು ಸಂಚಾರಕ್ಕೆ ಯೋಗ್ಯವಾದ ಸ್ಥಿತಿಯಲ್ಲಿಲ್ಲ. ಜಿಲ್ಲಾ ಬೋರ್ಡ್‌ಗಳು ರಸ್ತೆಗಳು ಮತ್ತು ಇತರ ಕೆಲಸಗಳು ಉತ್ತಮವಾಗಲು ಅಥವ ಸುಧಾರಿಸಲು ಏನೇನು ವ್ಯವಸ್ಥೆಮಾಡಿದ್ದರೇ ಅದು ಕುದುರುವುದಕ್ಕೆ ಬದಲಾಗಿ ಅನಿಷ್ಟ ಹೆಚ್ಚಾಗಿದೆ. ಇದಕ್ಕೆ ಸರ್ಕಾರದವರ ಉಪೇಕ್ಷೆಯೇ ಕಾರಣ. ಇದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಸರ್ಕಾರದವರ ಉಪೇಕ್ಷೆ ಬಹಳವಾಗಿದೆ. ಸರ್ಕಾರದವರು ಜಿಲ್ಲಾಬೋರ್ಡುಗಳಿಗೆ ಕೊಡಬೇಕಾದ ಹಣವನ್ನು ಕೊಟ್ಟಿಲ್ಲ. ಗ್ರಾಂಟ್ ರೂಪದಲ್ಲಿ ಒಂದು ಮೊತ್ತವನ್ನು ಕೊಟ್ಟು, ಕಾನೂನು ಪ್ರಕಾರ ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಬರಬೇಕಾಗಿದೆ, ಅದರಪ್ರಕಾರ ಕೊಟ್ಟಿರುವುದು ಎಷ್ಟು ಎನ್ನುವುದರ ಲೆಕ್ಕವನ್ನು ಇವೊತ್ತಿಗೂ ಕೊಟ್ಟಿಲ್ಲ. ನಾನಾ ಕಾನೂನುಗಳಿಗೆ ನಿಬಂಧನೆಗಳನ್ನು ಇನ್ನೂ ಮಾಡುವುದರಲ್ಲಿದ್ದಾರೆ—ಇದರಿಂದ ಕೆಲವು ಕಡೆ ಹೆಚ್ಚಿಗೆ ಮತ್ತೆ ಕೆಲವು ಕಡೆ ಕಡಮೆ ಹಣ ಕೊಡುತ್ತಿದ್ದಾರೆ. ಎಕ್ಸೈಜ್ ಬಾಬಿನಿಂದ ಹೆಚ್ಚಿಗೆ ಬಂದರೆ ಅದನ್ನು ಕಾಂಪೆನ್ಸೇಟ್ ಮಾಡುತ್ತೇವೆಂದು, ಎಲ್ಲೆಲ್ಲಿ ಕುಡಿತವನ್ನು ತಪ್ಪಿಸಿದ್ದರಿಂದ ಎಕ್ಸೈಜ್ ರೆವೆನ್ಯೂನಿಂದ ಬರತಕ್ಕ ಹಣ ಲುಕ್ಸಾನಾಯಿತೋ ಅಂಥಕಡೆಗಳಿಗೆಲ್ಲ ಕಾಂಪೆನ್ಸೇಟ್ ಮಾಡುತ್ತೇವೆಂದು ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿದರು. ಆದರೆ ಇವತ್ತಿನವರೆಗೂ ಮೂರುಕಾಸನ್ನೂ ಕೊಟ್ಟಿಲ್ಲ. ಈ ಆರ್ಡರು ಸರ್ಕಾರದ ಕಡತದಲ್ಲಿದೆ. ಇಷ್ಟು ನಿರಾದರಣೆಯಿಂದ, ಇಷ್ಟು ಉಪೇಕ್ಷೆಯಿಂದ, ಇಷ್ಟು ನಿರ್ಲಕ್ಷ್ಯದಿಂದ ಇರಬಾರದು. ದೇಶದ ಹಿತಕ್ಕೋಸ್ಕರ ನಿರ್ಮಾಣವಾಗಿರತಕ್ಕ ಕೆಲಸ ಕಾರ್ಯಗಳ ಬಗ್ಗೆ ಈ ರೀತಿ ಮಾಡಬಾರದಾಗಿತ್ತು. ಯಥಾಪ್ರಕಾರ ಒಂದ experiment ಸ್ಥಳೀಯ ಸಂಸ್ಥೆಗಳಬಗ್ಗೆ ನಡೆದಿದೆ. ಸುಧಾರಣೆಯಾಗಬೇಕು ಎನ್ನುವುದನ್ನು ಬಿಟ್ಟು ಉಳಿದುದೆಲ್ಲ ನಡೆದಿದೆ. ಈ ವಿಷಯಗಳನ್ನು ತೀವ್ರಾಸಕ್ತಿಯಿಂದ ದೂರಾಲೋಚನೆ ಮಾಡಿ, ತಾಲ್ಲೂಕು ಬೋರ್ಡುಗಳ ನಿರ್ಮಾಣವನ್ನು ಕೈಬಿಟ್ಟು ಜಿಲ್ಲಾ ಬೋರ್ಡುಗಳನ್ನು ಇಟ್ಟುಕೊಂಡು ಅವುಗಳ ವತಿಯಿಂದ ಜಿಲ್ಲೆಯಲ್ಲಿನ ಕಾರ್ಯಗಳು ನಡೆಯುವಂತೆ ಮಾಡಿ. ಶೇಕಡ 25 ರಷ್ಟು ರೆವೆನ್ಯೂ ಕಂದಾಯವನ್ನು ಜಿಲ್ಲಾಬೋರ್ಡುಗಳಿಗೆ ಕೊಟ್ಟು 75 ರಷ್ಟನ್ನು ಗ್ರಾಮಪಂಚಾಯಿತಿಗಳಿಗೆ ಕೊಡುವುದರ ಮೂಲಕ ಗ್ರಾಮಪಂಚಾಯಿತಿಗಳನ್ನು ಸ್ವಯಂಪೂರ್ಣವಾಗಿ ಮಾಡತಕ್ಕ ವಿಧಾನವನ್ನು ಜಾರಿಗೆ ತಂದು ಕೀರ್ತಿ ಪಡೆಯಿರಿ. ಜಿಲ್ಲಾಬೋರ್ಡುಗಳಿಗೆ ಸಹಾಯ ಮಾಡಿ ಅವರೂ ಸಹ ದೇಶಕ್ಕೆ ಒಳ್ಳೆಯದು ಮಾಡುವಂತೆ ಮಾಡಿ. ತಾಲ್ಲೂಕು ಬೋರ್ಡುಗಳಿಗೆ ಕೊಡಬೇಕೆಂದು ಸೂಚಿಸಿರುವ obligatory duties ಏನಿದೆ ಅವುಗಳನ್ನೂ ಮತ್ತು ಜನೋಪಕಾರಿಯಾದ ಕೆಲಸಗಳನ್ನೂ ಜಿಲ್ಲಾ ಬೋರ್ಡುಗಳಿಗೆ ಮಾಡಬೇಕು. ಹಾಗೆ ಮಾಡದೆ ಸುಮ್ಮನೆ ಕುಳಿತುಕೊಳ್ಳುವುದಾದರೆ ದೇಶದ್ರೋಹಮಾಡಿದಂತಾಗುತ್ತದೆ. ದಯವಿಟ್ಟು ಇದನ್ನೆಲ್ಲ ವಿಚಕ್ಷಣೆಯಿಂದ ಆಲೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

Sri G. ANNA RAO (Afzalpur).—Mr. Speaker, Sir, I welcome this Bill because there are many provisions which are quite welcome and they will really give impetus to the working of the village panchayats in our State. This Bill ought to have been brought somewhat earlier. But, because of the new difficulties on the formation of the new State, I think the Bill has come up somewhat late. In this Bill there are many points which have to be looked into; and some provisions, in my opinion, have also to be added on to this Bill.

